MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111
YUVA MARGA KANNADA DAILY NEWS PAPER
ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 05 | ಸಂಚಿಕೆ: 42 | ಶನಿವಾರ : 29–11–2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 42 | SATURDAY : 29–11–2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

# ಕರ್ನಾಟಕ ಲೋಕಾಯುಕ್ತ ವತಿಯಿಂದ

## ಸಾರ್ವಜನಿಕ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ

**ಯುವಮಾರ್ಗ ಸುದ್ದಿ**

**ಮಾನ್ವಿ,ನ.28–** ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ರಾಯಚೂರು ವತಿಯಿಂದ ನಡೆದ ಸಾರ್ವಜನಿಕ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ರಾಯಚೂರು ಎಸ್.ಪಿ. ಸತೀಶ್ ಚಿಟಗುಪ್ಪಿ ಸಾರ್ವಜನಿಕರಿಂದ ಕುಂದು ಕೊರತೆ ಮತ್ತು ಅಹವಾಲುಗಳನ್ನು ಸ್ವೀಕಾರಿಸಿ ಮಾತನಾಡಿ ಕಾರ್ಯಕ್ರಮದಲ್ಲಿ 192 ಫಾರಂ ಅಡಿಯಲ್ಲಿ 3 ದೂರುಗಳು ಹಾಗೂ ಜಿಲ್ಲಾಧಿಕಾರಿಗಳಿಗೆ,ತಹಸೀಲ್ದಾರ್ ,ತಾಲೂಕು ಪಂಚಾಯಿತಿ ಇಲಾಖೆಗೆ ಸೇರಿದ 12 ಅಹವಾಲುಗಳನ್ನು ಸ್ವಿಕರಿಸಲಾಗಿದ್ದು ಅವುಗಳನ್ನು ಸಂಬಂದಿಸಿದ ಇಲಾಖೆಗೆ ಕಳುಹಿಸಲಾಗುವುದು ಸಾರ್ವಜನಿಕರಿಗೆ ಹಾಗೂ ಫಲಾನುಭಾವಿಗಳಿಗೆ ಸರ್ಕಾರಿ ಕಚೇರಿಗಳಲ್ಲಿ ಸರ್ಕಾರದ ಸೇವೆಗಳನ್ನು ಹಾಗೂ ಸೌಲಭ್ಯಗಳನ್ನು ಪಡೆಯುವುದಕ್ಕೆ ಸರ್ಕಾರಿ ಅಧಿಕಾರಿಗಳಿಂದ ತೊಂದರೆಯಾದಲ್ಲಿ, ಅನಗತ್ಯವಾದ ವಿಳಂಬವಾದಲ್ಲಿ, ಅಥಾವ ಯಾವುದೆ ಬೇಡಿಕೆಗಳನ್ನು ಇಟ್ಟಲ್ಲಿ ಸಾರ್ವಜನಿಕರು ಕರ್ನಾಟಕ ಲೋಕಾಯುಕ್ತ ರಾಯಚೂರು ರವರಲ್ಲಿ ದೂರು ಹಾಗೂ ಅಹಾವಲುಗಳನ್ನು ಸಲ್ಲಿಸಿ ಪರಿಹಾರ ಪಡೆಯಬಹುದಾಗಿದೆ ಸಾರ್ವಜನಿಕರಿಗೆ ತಮ್ಮ ಕುಂದು ಕೊರತೆ ಮತ್ತು ಅಹವಾಲುಗಳನ್ನು ಸಲ್ಲಿಸುವುದಕ್ಕೆ ಅನುಕೂಲವಾಗುವಂತೆ ಜಿಲ್ಲೆಯ ವಿವಿಧ ತಾಲೂಕುಗಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಕುಂದು ಕೊರತೆ ಮತ್ತು ಅಹವಾಲುಗಳನ್ನು ಸ್ವೀಕಾರ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಕೆ.ಆರ್.ಎಸ್. ಪಕ್ಷದ ತಾ.ಅಧ್ಯಕ್ಷರಾದ ರಮೇಶನಾಯಕ ಲೋಕಯುಕ್ತರಲ್ಲಿ ಅಹವಾಲು ಸಲ್ಲಿಸಿ ತಾಲೂಕಿನಲ್ಲಿ ಶಾಲಾ ವಾಹನಗಳು ಹೆಚ್ಚು ಅಪಘಾತಕ್ಕೆ ಒಳಗಾಗುತ್ತಿರುವುದರಿಂದ ಮಕ್ಕಳ ಸುರಕ್ಷತೆಗಾಗಿ ಸಾರಿಗೆ ಇಲಾಖೆ ಅಧಿಕಾರಿಗಳು ಶಾಲಾ ವಹಾನಗಳ ಫಿಟ್ನೆಸ್ ಪರಿಶೀಲಿಸಬೇಕು, ಚಾಲಕರ ಚಾಲನ ಪ್ರಮಾಣ ಪತ್ರವನ್ನು ಪರಿಶೀಲಿಸಿ ಮಕ್ಕಳ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು, ಪುರಸಭೆಯಿಂದ ಪಟ್ಟಣದ ವಿವಿಧ ವಾರ್ಡ್ಗಳಲ್ಲಿ ವಿತರಿಸಲಾಗುತ್ತಿರುವ ಕಸದ ಬುಟ್ಟಿ ಕಳಪೆ ಗುಣಮಟ್ಟದಿಂದ ಕೂಡಿದ್ದು ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



**ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ರಾಯಚೂರು ಎಸ್.ಪಿ. ಸತೀಶ್ ಚಿಟಗುಪ್ಪಿ ಸಾರ್ವಜನಿಕರಿಂದ ಕುಂದು ಕೊರತೆ ಆಲಿಸಿ ಅಹವಾಲುಗಳನ್ನು ಸ್ವೀಕರಿಸಿದರು.**

ಮೇಜರ್ ಶಹಾನವಾಜ್ ಖಾನ್ ಹೈದ್ರಾಬಾದ್ ಕರ್ನಾಟಕ ಸಂಘದ ಅಧ್ಯಕ್ಷರಾದ ಎಸ್.ಎಂ.ಶಾನವಾಜ್ ಪಟ್ಟಣದ ಸರ್ಕಾರಿ ಖಾಬರಸ್ಥಾನ ವಕ್ಪಗೆ ಸೇರಿದ್ದು ಅತಿಕ್ರಮಣಕ್ಕೆ ಒಳಗಾಗಿದ್ದು ಹದುಬಸ್ತ ಮಾಡಿಕೊಡುವಂತೆ ಕೋರಿದರು. ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕರಾದ ಪ್ರಭುರಾಜ್ ಕೋಡ್ಲಿ ಮನವಿ ಸಲ್ಲಿಸಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಪರಿಶಿಷ್ಟ ಜಾತಿ ಸಮುದಾಯದವರ ವಸತಿ ನಿಲಯಗಳಿಗೆ ಆಹಾರ ಸಾಮಾಗ್ರಿಗಳನ್ನುಪೂರೈಸುವುದಕ್ಕೆ ಟೆಂಡರ್ ಪಡೆದ ಗುತ್ತಿಗೆದಾರರು ಇದುವರೆಗೆ ಕೂಡ ವಸತಿ ನಿಲಯಗಳಿಗೆ ಅಗತ್ಯ ಆಹಾರ ಸಾಮಾಗ್ರಿಗಳನ್ನುಪೂರೈಕೆ ಮಾಡದೆ ಇರುವುದರಿಂದ ವಸತಿ ನಿಲಯದ ಮಕ್ಕಳಿಗೆ ಪೌಷ್ಟಕಾಂಶಯುತ ಗುಣಮಟ್ಟದ ಆಹಾರ ದೊರೆಯದೆ ಮಕ್ಕಳ ಆರೋಗ್ಯದ ಮೇಲೆ ಗಂಭಿರವಾದ ಆರೋಗ್ಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದು ಕ್ರಮ ಕೈಗೊಳ್ಳಬೇಕು.

ಕಲ್ಮಾಲದಿಂದ ಸಿಂಧನೂರು ವರೆಗಿನ ಚತುಷ್ಪತ್ ರಸ್ತೆ ಯನ್ನು ನಿರ್ಮಾಣ ಮಾಡುತ್ತಿರುವ ಗುತ್ತಿಗೆ ಸಂಸ್ಥೆಯವರು ಹಾಗೂ ಕರ್ನಾಟಕ ರಾಜ್ಯ ಹೆದ್ದಾರಿ ಇಲಾಖೆ ಅಧಿಕಾರಿಗಳು ರಸ್ತೆ ನಡುವಿನಿಂದ 50 ಅಡಿ ನಿರ್ಮಾಣ ಮಾಡಬೇಕಾಗಿರುವ ರಸ್ತೆಯನ್ನು 30 ಅಡಿಗಳಿಗೆ ಕುಗ್ಗಿಸಿದ್ದು ಮುಂದಿನ ದಿನಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಲಿರುವುದರಿಂದ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. **(2ನೇ ಪುಟಕ್ಕೆ)**

# ಜೋಳ ಖರೀದಿ ಗುರಿ ಇಳಿಕೆ: ಸರ್ಕಾರದ ಕ್ರಮದ ವಿರುದ್ಧ ರೈತರ ಆಕ್ರೋಶ



**ಯುವಮಾರ್ಗ ಸುದ್ದಿ**

**ಮಾನ್ವಿ,ಟ.28–** ತಾಲೂಕಿನ ಅತಿ ಹೆಚ್ಚು ಜೋಳ ಬೆಳೆಯುವ ಪೋತ್ನಾಳ್ ಹೋಬಳಿಯಲ್ಲಿ ಜೋಳ ಖರೀದಿ ಕೇಂದ್ರವನ್ನು ತೆರೆಯಬೇಕು ಹಾಗೂ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಜೋಳದ ಖರೀದಿ ಪ್ರಮಾಣವನ್ನು ಕಳೆದ ಬಾರಿಯಂತೆ ಹೆಚ್ಚಿಸಬೇಕೆಂದು ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘ ಹಾಗೂ ತಾಲೂಕಿನ ಜೋಳಬೆಳೆಗಾರರ ಸಂಘದ ಅಧ್ಯಕ್ಷರಾದ ನಾಗನಗೌಡ ಒತ್ತಾಯಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಅತಿವೃಷ್ಟಿಯಿಂದಾಗಿ ಈಗಾಗಲೇ ಜೋಳದ ಇಳುವರಿ ಕುಸಿತ ಕಂಡಿದೆ. ಇದರ ನಡುವೆ ಜಿಲ್ಲಾಡಳಿತದ ಅವೈಜ್ಞಾನಿಕ ತೀರ್ಮಾನಗಳಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನಲ್ಲಿ ಅತಿ ಹೆಚ್ಚು ಜೋಳ ಬೆಳೆಯುವ ಪ್ರದೇಶ ಪೋತ್ನಾಳ್ ಹೋಬಳಿಯಾಗಿದೆ. ಆದರೆ, ಜಿಲ್ಲಾಡಳಿತವು ಇಲ್ಲಿ ಖರೀದಿ ಕೇಂದ್ರ ತೆರೆಯದೆ, ಜೋಳ ಬೆಳೆಯದ ಕುರ್ಡಿ ಭಾಗದಲ್ಲಿ ಹಾಗೂ ಮಾನ್ವಿಯ ಜಾನೆಕಲ್ ಮತ್ತು ಟಿ.ಎ.ಪಿ.ಎಂ.ಎಸ್. ಗಳಲ್ಲಿ ಮಾತ್ರ ಕೇಂದ್ರಗಳನ್ನು ತೆರೆದಿದೆ. ಇದರಿಂದಾಗಿ ಪೋತ್ನಾಳ್ ಭಾಗದ ರೈತರು ನೋಂದಣಿ ಮತ್ತು ಮಾರಾಟಕ್ಕಾಗಿ ದೂರದ ಕೇಂದ್ರಗಳಿಗೆ ಬೆಳೆಯನ್ನು ಸಾಗಿಸಬೇಕಾಗಿದೆ. ಅಲ್ಲದೆ, ಅಲ್ಲಿ ಸರತಿ ಸಾಲಿನಲ್ಲಿ ದಿನಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದು ರೈತರಿಗೆ ಆರ್ಥಿಕ ನಷ್ಟವನ್ನು ಉಂಟುಮಾಡುತ್ತಿದೆ ಎಂದು ಅವರು ದೂರಿದರು. ಮುಂದುವರೆದು ಮಾತನಾಡಿದ ಅವರು, ಕಳೆದ ಬಾರಿ ಸರ್ಕಾರ ಬೆಂಬಲ ಬೆಲೆಯಲ್ಲಿ ತಾಲೂಕಿನಿಂದ 2.25 ಲಕ್ಷ ಮೆಟ್ರಿಕ್ ಟನ್ ಜೋಳ ಖರೀದಿಸಿತ್ತು. ಆದರೆ, ಈ ಬಾರಿ ಈ ಗುರಿಯನ್ನು ಕೇವಲ 88 ಸಾವಿರ ಮೆಟ್ರಿಕ್ ಟನ್‌ಗೆ ಇಳಿಸಲಾಗಿದೆ. ಇದರಿಂದ ರೈತರಿಗೆ ತೀವ್ರ ಅನ್ಯಾಯವಾಗಲಿದ್ದು, ಕಳೆದ ಬಾರಿಯಷ್ಟೇ ಪ್ರಮಾಣವನ್ನು ಈ ಬಾರಿಯೂ ಖರೀದಿಸಬೇಕು ಹಾಗೂ ರೈತರ ಜಮೀನಿನಲ್ಲಿ ಬೆಳೆದಿರುವ ಜೋಳದ ಬೆಳೆಯನ್ನು ಸಮರ್ಪಕವಾಗಿ ಜಿ.ಪಿ.ಎಸ್ (ಉಕಖ) ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ದುರುಗಪ್ಪ ತಡಕಲ್, ರಾಮನಗೌಡ, ಮಹಾದೇವಪ್ಪ, ಶರಣೇಗೌಡ ಹಾಗೂ ಅಮರೇಗೌಡ ಉಪಸ್ಥಿತರಿದ್ದರು.

# ಪುರುಷರು ಸಹ ಸುಲಭವಾದ ಎನ್‌ಎಸ್‌ವಿ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಅವಕಾಶವಿದೆ

**ಯುವಮಾರ್ಗ ಸುದ್ದಿ**



**ರಾಯಚೂರು,ನ.28–**ಜೀವನದಲ್ಲಿ ದಾಂಪತ್ಯ ಜೀವನಕ್ಕೆ ಬಹಳಷ್ಟು ಮಹತ್ವ ನೀಡುವ ನಾವೆಲ್ಲರೂ ಚಿಕ್ಕ ಕುಟುಂಬಕ್ಕಾಗಿ ಮಕ್ಕಳ ಜನನದ ಸಂಪೂರ್ಣ ನಿಯಂತ್ರಣಕ್ಕಾಗಿ ಮಹಿಳೆಯರು ಮಾತ್ರ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆ. ದಂಪತಿಯು ನಿರ್ಧಾರ ಕೈಗೊಂಡಲ್ಲಿ ಪುರುಷರಿಗೆ ಇರುವ ಸರಳ ವಿಧಾನವಾದ ಎನ್‌ಎಸ್‌ವಿ (ನೋ ಸ್ಕಾಲ್ ಪೇಲ್ ವ್ಯಾಸೆಕ್ಟುಮಿ) ಶಸ್ತ್ರಚಿಕಿತ್ಸೆಯನ್ನು ಮಾಡಿಸುವ ಮೂಲಕ ಸಂತಸದ ಕುಟುಂಬ ಹೊಂದಲು ಅವಕಾಶವಿದ್ದು, ರಾಯಚೂರು ಜಿಲ್ಲೆಯ ಎಲ್ಲ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ, ರಿಮ್ಸ್ನಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದ್ದು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ. ಶಿವಕುಮಾರ ನಾರಾ ವಿನಂತಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ರಾಯಚೂರು ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನವೆಂಬರ್ 28ರಂದು ಹಮ್ಮಿಕೊಂಡ "ನೋ ಸ್ಕಾಲ್‌ಪೇಲ್ ವ್ಯಾಸೆಕ್ಟುಮಿ" (ಎನ್‌ಎಸ್‌ವಿ) ಶಸ್ತ್ರಚಿಕಿತ್ಸೆ ಕುರಿತ ಜಾಗೃತಿ ಪಾಕ್ಷಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪುರುಷರಿಗೆ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿದರೆ ಪುರುಷತ್ವಕ್ಕೆ ದಕ್ಕೆ ಬರುವುದೆಂಬ ತಪ್ಪು ನಂಬಿಕೆಗಳಿರುವುದರಿಂದ ದಂಪತಿಗಳು ಮಕ್ಕಳು ಬೇಡವೆಂದು ನಿರ್ಧರಿಸಿದಾಗ ಕೇವಲ ಮಡದಿಗೆ ಮಾತ್ರ ಲ್ಯಾಪರೊಸ್ಕೋಪಿಕ್ ಅಥವಾ ಟ್ಯುಬೆಕ್ಟುಮಿ ಶಸ್ತ್ರಚಿಕಿತ್ಸೆ ಮಾಡಿಸುವುದು ವಾಡಿಕೆಯಾಗಿದೆ. ದಯವಿಟ್ಟು ತಪ್ಪು ನಂಬಿಕೆಗಳನ್ನು ನಂಬದೆ ಅತ್ಯಂತ ಸರಳ–ಸುಲಭವಾದ "ನೋ ಸ್ಕಾಲ್‌ಪೇಲ್ ವ್ಯಾಸೆಕ್ಟುಮಿ" (ಎನ್‌ಎಸ್‌ವಿ) ಶಸ್ತ್ರಚಿಕಿತ್ಸೆಗೆ ಪತಿಯು ಸಹ ಮುಂದೆ ಬರುವ ನಿರ್ಧಾರ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಮಹಮ್ಮದ್ ಶಾಕೀರ್ **(2ನೇಪುಟಕ್ಕೆ)**

# ಬಂಜಾರ ಸಮಾಜದಿಂದ ಪ್ರತಿಭಾ ಪುರಸ್ಕಾರ ನಾಳೆ




**ಯುವಮಾರ್ಗ ಸುದ್ದಿ**

**ಲಿಂಗಸುಗೂರು,ನ.28–** ಪಟ್ಟಣದ ವಿಜಯಮಹಾಂತೇಶ್ವರ ಶಾಖಾಮಠದಲ್ಲಿ ಗೋರ್ ಬಂಜಾರ ನೌಕರರ ಬಳಗದ ವತಿಯಿಂದ ಸಮಾಜದ ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಾಳೆ (ನ.30) ಬೆಳಗ್ಗೆ 11 ಗಂಟೆಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಜಿಲ್ಲಾ ಉಪಾಧ್ಯಕ್ಷ ಶಟ್ಟೆಪ್ಪ ನಾಯ್ಕ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಯಚೂರು ಜಿಲ್ಲಾ ಮಟ್ಟದ 4ನೇ ಪ್ರತಿಭಾ ಪುರಸ್ಕಾರ ಸಮಾರಂಭ ಇದಾಗಿದ್ದು, ಎಸ್‌ಎಸ್‌ಎಲ್‌ಸಿ, ಪಿಯು, ಪದವಿ, ಉನ್ನತ ಪದವಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳು, ಐಐಟಿ, ಕೆಎಎಸ್, ಐಎಎಸ್ ಸೇರಿ ನಾನಾ ಕ್ಷೇತ್ರಗಳಲ್ಲಿ ಸಾಧನೆಗೈದ 100ಕ್ಕೂ ಹೆಚ್ಚು ಪ್ರತಿಭಾವಂತರಿಗೆ ಸಮಾರಂಭದಲ್ಲಿ ಪುರಸ್ಕರಿಸಲಾಗುವುದು. ಸಮಾಜದ ಬಂಧುಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಜಿಲ್ಲಾ ಪ್ರದಾನ ಕಾರ್ಯದರ್ಶಿ ರಾಮು ನಾಯ್ಕ, ವಿಶ್ವನಾಥ ನಾಯ್ಕ, ರಮೇಶ ನಾಯ್ಕ, ಮೇಘಾ ನಾಯ್ಕ ಸೇರಿ ಇತರರಿದ್ದರು.

# ಕೆಪಿಆರ್‌ಎಸ್ 14ನೇ ಜಿಲ್ಲಾ ಸಮ್ಮೇಳನ ನಾಳೆ : ನರಸಣ್ಣ ನಾಯಕ

**ಯುವಮಾರ್ಗ ಸುದ್ದಿ**

**ಲಿಂಗಸುಗೂರು,ನ.28–**ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ದ 14ನೇ ಜಿಲ್ಲಾ ಸಮ್ಮೇಳನ ನಾಳೆ (ನ.30) ತಾಲೂಕಿನ ಹಟ್ಟಿ ಪಟ್ಟಣದ ಪ್ರೈಭವ ನದಲ್ಲಿ ಜರುಗಲಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ನರಸಣ್ಣನಾಯಕ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಯಚೂರು ಜಿಲ್ಲೆಯಲ್ಲಿ ಪತ್ತೆಯಾಗಿರುವ ಬಂಗಾರದ ನಿಕ್ಷೇಪವಿರುವ ಬ್ಲಾಕ್‌ಗಳಲ್ಲಿ ಗಣಿ ಪ್ರಾರಂಬಿಸಿ ಯುವಕರಿಗೆ ಉದ್ಯೋಗ ನೀಡಬೇಕು. ಅತಿವೃಷ್ಠಿಗೆ ಹಾನಿಯಾದ ಬೆಳೆಗಳಿಗೆ ಪರಿಹಾರ ನೀಡಬೇಕು. ಎಲ್ಲಾ ಬೆಳೆಗಳನ್ನು ಸಕಾಲದಲ್ಲಿ ಖರೀದಿ ಕೇಂದ್ರದ ಮೂಲಕ




ಬೆಂಬಲ ಬೆಲೆ ನೀಡಿ ಸರಕಾರ ಖರೀದಿ ಮಾಡಬೇಕು. ಬಡವರಿಗೆ ಉಚಿತ ನಿವೇಶನ ಹಂಚಿಕೆ ಮಾಡಬೇಕು. 60 ವಯಸ್ಸಾದ ರೈತರಿಗೆ ರೈತ ಪಿಂಚಣಿಯನ್ನು ಘೋಷಣೆ ಮಾಡಬೇಕು. ನಾರಾಯಣಪುರ ಬಲದಂಡೆ ಕಾಲುವೆಯ ಕೊನೆಯ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಒದಗಿಸಬೇಕು. ತುಂಗಭದ್ರಾ ಜಲಾಶಯದ ಹೂಳು ತೆಗೆಯಬೇಕು. ಜಲಾಶಯಕ್ಕೆ ಭದ್ರ ಕ್ರಸ್ಟ್‌ಗೇಟುಗಳನ್ನು **(2ನೇಪುಟಕ್ಕೆ)**

# ಮೊದಲನೇಯ ಪುಟದಿಂದ

## ಕರ್ನಾಟಕ ಲೋಕಾಯುಕ್ತ ವತಿಯಿಂದ ಸಾರ್ವಜನಿಕ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ

ಚೀಕಲಪರ್ವಿ ಗ್ರಾಮದ ಹತ್ತಿರ ನಿರ್ಮಾಣ ವಾಗುತ್ತಿರುವ ವಿದ್ಯುತ್ ಉಪ ಕೇಂದ್ರಕ್ಕೆ ಅಗತ್ಯವಿರು ನೂರಾರು ಎಕರೆ ಭೂಮಿಯನ್ನು ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಮೊತ್ತಕ್ಕೆ ಖರೀದಿಸಿ ಸರ್ಕಾರದ ಬೋಕಸಕ್ಕೆ ನಷ್ಟ ಉಂಟುಮಾಡಿದ್ದು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ದಲಿತ ಸೇನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಜಾವಿದ್ ಖಾನ್ ಮನವಿ ಸಲ್ಲಿಸಿ ಮಾನ್ವಿ ಪಟ್ಟಣದ ಅಂಬೇಡ್ಕರ್ ನಗರ ನವನಗರ,ಸೋನಿಯಾಗಾಂಧಿ ನಗರ, ಲಘುವಾಹನ ಚಾಲಕರ ಸಂಘದ ಪತ್ರಕರ್ತರ ಸಂಘ ಹಮಾಲರ ಸಂಘಗಳ ಪಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡಬೇಕು ಹಾಗೂ ಮೂಲಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಮಹಿಳೆಯೊಬ್ಬರು ವಲಸೆದಾರರಿಗೆ ತಮ್ಮ ಹತ್ತಿರದ ನ್ಯಾಯಬೇಲೆ ಅಂಗಡಿಯಲ್ಲಿ ಪಡಿತರ ಚೀಟಿಗೆ ಅಗತ್ಯ ಪಡಿತರ ನೀಡುತ್ತಿಲ್ಲ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿಕೊಂಡರು.

ಕರ್ನಾಟಕ ಲೋಕಾಯುಕ್ತ ರಾಯಚೂರು ಹಾಗೂ ತಾಲೂಕು ಆಡಿಳಿತದಿಂದ ಸಾರ್ವಜನಿಕ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮದ ಬಗ್ಗೆ ಸರಿಯಾದ ಪ್ರಚಾರ ಹಾಗೂ ಮಾಹಿತಿ ನೀಡದೆ ಇರುವುದರಿಂದ ಸಾರ್ವಜನಿಕರಿಂದ ಹೆಚ್ಚಿನ ಅಹವಾಲುಗಳು ಸಲ್ಲಿಕೆಯಾಗಿಲ್ಲ ಅದ್ದರಿಂದ ಮುಂದಿನ ದಿನಗಳಲ್ಲಿ ಸ್ಥಳಿಯ ಮಾಧ್ಯಮದವರಿಗೆ ಹಾಗೂ ಬ್ಯಾನರ್ ಅಳವಡಿಸಿ ಜನರಿಗೆ ಮಾಹಿತಿ ನೀಡಿದಲ್ಲಿ ಹೆಚ್ಚಿನ ಜನರು ಕಾರ್ಯಕ್ರಮದಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಹೇಳಿಕೊಂಡು ಪರಿಹಾರ ಪಡೆಯುವುದಕ್ಕೆ ಸಾಧ್ಯವಾಗಲಿದೆ .

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ, ಕರ್ನಾಟಕ ಲೋಕಾಯುಕ್ತ ರಾಯಚೂರು ಪಿ.ಐ. ಕಾಳಪ್ಪ ಬಡಿಗೇರ್,ಪಿ.ಐ. ರವಿಪುರುಷೋತ್ತಮ ಹಾಗೂ ಮಾನ್ವಿ ಪೋಲಿಸ್ ಠಾಣೆಯ ಪಿ.ಐ. ಸೋಮಸೇಖರ ಎಸ್.ಕೆಂಚರೆಡ್ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ತಾ.ಅರೋಗ್ಯಧಿಕಾರಿ ಡಾ.ಶರಣಸವರಾಜು, ಪ,ವರ್ಗಗಳ ಕಲ್ಯಾಣಧಿಕಾರಿ ಮಹಾಲಿಂಗಪ್ಪ ಇಂಗಳಾದಳ್,ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

## ಪುರುಷರು ಸಹ ಸುಲಭವಾದ ಎನ್‌ಎಸ್‌ವಿ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಅವಕಾಶವಿದೆ

ಮೋಹಿಯುದ್ದಿನ್ ಮಾತನಾಡಿ, ಮುಖ್ಯವಾಗಿ ಪತ್ನಿಯು ಗಂಡಾಂತರ ಗರ್ಭಿಣಿಯೆಂದು ನಿರ್ಧರಿಸುವ ಅಂಶಗಳಾದ 30 ವರ್ಷ ವಯಸ್ಸಿನ ನಂತರ ಗರ್ಭಿಣಿಯಾದಲ್ಲಿ, ಎತ್ತರ 142 ಸೆಂ.ಮೀ. ಗಿಂತ ಕಡಿಮೆ ಇದ್ದಲ್ಲಿ, ಸಕ್ಕರೆ ಖಾಯಿಲೆ ಅಥವಾ ರಕ್ತದೊತ್ತಡ 140/90 ಗಿಂತ ಹೆಚ್ಚು ಇದ್ದಲ್ಲಿ, ಅವಳಿ–ಜವಳಿ ಮಕ್ಕಳಾದಲ್ಲಿ, ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಅಥವಾ ಯಾವುದಾದರೂ ಕಾಯಿಲೆಗೆ ದೀರ್ಘಾವಧಿ ಚಿಕಿತ್ಸೆ ಪಡೆಯುತ್ತಿದ್ದರೆ ಅವರ ಪತಿಯು ಎಸ್‌ಎಸ್‌ವಿ ಶಸ್ತ್ರಚಿಕಿತ್ಸೆ ಮಾಡಿಸಲು ಮುಂದೆ ಬರಬೇಕು. ಅಲ್ಲದೆ ಇದಕ್ಕಾಗಿ ರೂಪಾಯಿ 1100 ಪ್ರೋತ್ಸಾಹ ಧನವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಯಿ ಮಕ್ಕಳ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ ಪ್ರಜ್ವಲ್‌ಕುಮಾರ್, ಪ್ರಸೂತಿ ತಜ್ಞರಾದ ಶಾಲಿನಿ, ರೆಡಿಯಾಲಜಿಸ್ಟ್ ಭುವನೇಶ್ವರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಅಮರೇಶ ಗಡ್ಡಿ, ಸೇರಿದಂತೆ ಸಿಬ್ಬಂದಿ ವರ್ಗ, ಸಾರ್ವಜನಿಕರು ಉಪಸ್ಥಿತರಿದ್ದರು.

## ಕೆಪಿಆರ್‌ಎಸ್ 14ನೇ ಜಿಲ್ಲಾ ಸಮ್ಮೇಳನ ನಾಳೆ : ನರಸಣ್ಣ ನಾಯಕ

ಅಳವಡಿಸಬೇಕು. ಅರ್ಧಕ್ಕೆ ನಿಂತಿರುವ ನಂದವಾಡಗಿ ಮತ್ತು ರಾಂಪುರ ಏತ ನೀರಾವರಿ ಯೋಜನೆಗಳನ್ನು ಪೂರ್ತಿಸಬೇಕು. ಲಿಂಗಸುಗೂರು, ಹಟ್ಟಿ ಮತ್ತು ಮುದಗಲ್ ಪಟ್ಟಣಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಬೇಕು. ಅಕ್ರಮ, ಸಕ್ರಮ ಸರಕಾರಿ ಭೂಮಿಯಲ್ಲಿ ಸಾಗುವಳಿ ಮಾಡುವಂತೆ ರೈತರಿಗೆ ಭೂಮಿ ಪಟ್ಟಾನೀಡಬೇಕು. ಸೇರಿ ನಾನಾ ಬೇಡಿಕೆಗಳ ಈಡೇರಿಗೆ ಸರಕಾರಕ್ಕೆ ಒತ್ತಾಯಿಸಲಾಗುವುದು ಎಂದರು.

ಕೃಷಿ ಉಪನಿರ್ದೇಶಕರ ಕಚೇರಿ ಸ್ಥಳಾಂತರ ವಿರೋಧಿಸಿ ಹಮ್ಮಿಕೊಂಡಿರುವ ರೈತರ ಮುಷ್ಕರಕ್ಕೆ ನಮ್ಮದೂ ಬೆಂಬಲವಿದೆ. ರಾಜಕಾರಣಿಗಳ ಇಚ್ಛಾಶಕ್ತಿ ಕೊರತೆ ಇಲ್ಲಿ ಎದ್ದು ಕಾಣಿಸುತ್ತಿದೆ. ಕೂಡಲೇ ಆದೇಶ ರದ್ದು ಪಡಿಸಬೇಕು. ಸಮ್ಮೇಳನದಲ್ಲಿ ರಾಜ್ಯ ಮುಖಂಡರು ಪಾಲ್ಗೊಳ್ಳಲಿದ್ದು, ಜಿಲ್ಲೆಯಲ್ಲಿರುವ ಸಂಘಟನೆಯ ಮುಖಂಡರು, ಕಾರ್ಯಕರ್ತರು, ರೈತಾಪಿವರ್ಗ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಎಂದು ಜಿಲ್ಲಾ ಉಪಾಧ್ಯಕ್ಷ ಬಸವಂತರಾಯಗೌಡ ಹೇಳಿದರು.

ಈ ಸಂದರ್ಭದಲ್ಲಿ ರಮೇಶ ವೀರಾಪೂರ, ನಿಂಗಣ್ಣ ವೀರಾಪೂರ, ವನಜಾಕ್ಷಿ ಸೇರಿದಂತೆ ಇತರರು ಇದ್ದರು.

## ನವ ಸಂಕಲ್ಪಕ್ಕೆ ಮೋದಿ ಕರೆ

**ಉಡುಪಿ, ನ. 28–** ನೆಲ, ಜಲ ರಕ್ಷಣೆ ಸೇರಿದಂತೆ ನವ ಸಂಕಲ್ಪಗಳನ್ನು ಮಾಡುವಂತೆ ಪ್ರಧಾನಿ ನರೇಂದ್ರ ಮೋದಿಯವರು ದೇಶ ವಾಸಿಗಳಲ್ಲಿ ಮನವಿ ಮಾಡಿದರು.

ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಹಮ್ಮಿಕೊಂಡಿದ್ದ ಲಕ್ಷ ಕಂಠ ಗೀತಾ ಪಠಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು, ನವ ಸಂಕಲ್ಪದ (ಒಂಭತ್ತು) ಮನವಿ ಮಾಡಿ, ಈ ನವ ಸಂಕಲ್ಪ ವರ್ತಮಾನ ಮತ್ತು ಭವಿಷ್ಯಕ್ಕೆ ಅಗತ್ಯ ಎಂದು ಪ್ರತಿಪಾದಿಸಿದರು.

ಪ್ರಧಾನಿ ಮೋದಿಯವರು ಹೇಳಿದ ನವ ಸಂಕಲ್ಪಗಳಲ್ಲಿ ಮೊದಲ ಸಂಕಲ್ಪ ಜಲ ಸಂರಕ್ಷಣೆ ಮಾಡುವುದು, ಎರಡನೇಯ ಸಂಕಲ್ಪ ಮರ ಬೆಳೆಸುವುದು, ತಾಯಿ ಹೆಸರಲ್ಲಿ ಒಂದು ಮರ ಅಭಿಯಾನ ಪ್ರಾರಂಭಿಸುವುದು, ಮೂರನೇ ಸಂಕಲ್ಪ ಪ್ರತಿಯೊಬ್ಬರೂ ಕನಿಷ್ಠ ಪಕ್ಷ ಒಬ್ಬ ಬಡವನ ಜೀವನ ಸುಧಾರಿಸಿ ಎಂಬುದಾಗಿದ್ದರೆ, 4ನೇ ಸಂಕಲ್ಪ ಸ್ವದೇಶಿ ಅಳವಡಿಸಿಕೊಳ್ಳಿ, ವೋಕಲ್–ಲೋಕಲ್ ಮಂತ್ರ ನಮ್ಮದಾಗಲಿ, 5ನೇ ಸಂಕಲ್ಪ ನೈಸರ್ಗಿಕ ಕೃಷಿ ಅಳವಡಿಸಿ ಕೊಳ್ಳಿ ಎಂಬುದಾಗಿದೆ. ಇದರ ಜತೆಗೆ ಯೋಗ ಅಳವಡಿಸಿಕೊಳ್ಳಿ ಎಲ್ಲರೂ ಯೋಗಿಗಳಾಗಿ, ಪುರಾತನ ಹಸ್ತಪ್ರತಿ ಸಂರಕ್ಷಣೆ ಸಹಯೋಗ ನೀಡಿ, ಕನಿಷ್ಠ ಪಕ್ಷ ದೇಶದ 25 ಪುಣ್ಯ ಕ್ಷೇತ್ರಗಳ ದರ್ಶನ ಮಾಡುತ್ತೇವೆ ಎಂಬ ಸಂಕಲ್ಪ ಮಾಡಿ ಎಂದು ಪ್ರಧಾನಿ ಮೋದಿಯವರು ದೇಶ ವಾಸಿಗಳಿಗೆ ಕರೆ ನೀಡಿದರು.

2047ರ ಅಮೃತ ಕಾಲದ ಗುರಿಯನ್ನು ನನಸಾಗಿಸಲು ಭಾರತೀಯರೆಲ್ಲರೂ ತಮ್ಮ ಕರ್ತವ್ಯ ನಿರ್ವಹಿಸಬೇಕು. ವಿಕಸಿತ ಕರ್ನಾಟಕ, ವಿಕಸಿತ ಭಾರತ ಸಂಕಲ್ಪ ನಮ್ಮದಾಗಲಿ ಎಂದರು.ಪ್ರಧಾನಿ ಮೋದಿಯವರು ಎಲ್ಲರಿಗೂ ನಮಸ್ಕಾರ ಎಂದು ಕನ್ನಡದಲ್ಲೇ ಮಾತು ಆರಂಭಿಸಿ, ಜೈಶ್ರೀಕೃಷ್ಣ ಎಂಬ ಘೋಷಣೆ ಹಾಕಿದರು. ಪ್ರಧಾನಿ ಮೋದಿಯವರು ತಮ್ಮ ಭಾಷಣದಲ್ಲಿ ಲಕ್ಷ ಕಂಠ ಗೀತಾ ಪಠಣ ಅಭಿಯಾನ ಹಮ್ಮಿಕೊಂಡಿರುವ ಸುಗಣೇಂದ್ರ ಶ್ರೀಗಳಿಗೆ ಅಭಿನಂದನೆ ಹೇಳಿ, ಇದು ಸನಾತನ ಸಂಸ್ಕೃತಿ ಅಭಿಯಾನ. ಇದರಿಂದ ನನಗೆ ಬಹಳ ಪ್ರೇರಣೆ ಸಿಕ್ಕಿದೆ ಎಂದರು.

ಭಗವದ್ಗೀತೆಯೊಂದಿಗೆ ನವ ಪೀಳಿಗೆಯನ್ನು ಜೋಡಿಸುವ ಸತ್ಕಾರ್ಯ ಇದಾಗಿದೆ ಎಂದ ಅವರು, ಜಗದ್ಗುರು




ಮಧ್ವಾಚಾ ರ್ಯರಿಂದ ಸ್ಥಾಪನೆಯಿಂದ ಉಡುಪಿಯಲ್ಲಿ ವೇದಾನಂದ ಅಧ್ಯಯನ, ಭಗವಾನ್ ಶ್ರೀಕೃಷ್ಣನ ಆರಾಧನೆ ಇದೆ. ಲಕ್ಷಾಂತರ ಭಕ್ತರಿಗೆ ಅನ್ನದಾನ ಸೇವೆ ಇದೆ. ಇದು ಭಕ್ತಿ ಆಧ್ಯಾತ್ಮಿಕತೆಯ ಸಂಗಮ ತೀರ್ಥವಾಗಿದೆ ಎಂದರು.

ಉಡುಪಿಯಲ್ಲಿ ಮಧ್ವಾಚಾರ್ಯರೊಂದಿಗೆ ದಾಸ ಪರಂಪರೆಯೂ ಇಲ್ಲಿಯ ಇನ್ನೊಂದು ದೊಡ್ಡ ಕೊಡುಗೆ. ಕನಕದಾಸರ ಭಕ್ತಿಯು ದೊಡ್ಡದು ಎಂದರು.

ಲೋಕಕಲ್ಯಾಣದ ಸಂದೇಶ ಭಗದ್ಗೀತೆಯಲ್ಲಿದೆ. ಸರ್ವ ಜನ ಸುಖಾಯ–ಸರ್ವ ಜನ ಹಿತಾಯ ಎಂಬ ಭಗದ್ಗೀತೆಯ ಪ್ರೇರಣೆಯಿಂದಲೇ ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಯೋಜನೆ ಅನುಷ್ಠಾನಗೊಂಡಿದೆ ಎಂದರು.

ಭಗವಾನ್ ಶ್ರೀಕೃಷ್ಣ ಸಂದೇಶ ಪಾಲನೆಗಾಗಿ ದುರಾಚಾರಿಗಳ ಅಂತ್ಯವೂ ಅಗತ್ಯವಿದೆ. ಧರ್ಮ ರಕ್ಷಣೆ, ದುಷ್ಟ ಸಂಹಾರವೂ ನಮಗೆ ಗೊತ್ತು. ಧರ್ಮ ಸಂದೇಶವನ್ನು ಕೊಡುತ್ತೇವೆ. ಜತೆಗೆ ವಿಷ್ಣು ಸುದರ್ಶನ ಚಕ್ರದ ಪ್ರಯೋಗವನ್ನು ಮಾಡುತ್ತೇವೆ. ದೇಶ ವಿರೋಧಿಗಳ ಮೇಲೆ ನಮ್ಮ ಸುದರ್ಶನ ಚಕ್ರ ಪ್ರಯೋಗ ಎಂದು ಆಪರೇಷನ್ ಸಿಂಧೂರವನ್ನು ಪ್ರಧಾನಿ ಮೋದಿಯವರು ನೆನಪು ಮಾಡಿಕೊಂಡರು.

ಮೋದಿಗೆ ಭಾಗ್ಯವಿಧಾತ ಬಿರುದು: ಸನ್ಮಾನ

ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಹಮ್ಮಿಕೊಂಡಿದ್ದ ಲಕ್ಷ ಗೀತಾ ಪಠಣ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ಮೋದಿಯ ವರಿಗೆ ಭಾರತ ಭಾಗ್ಯವಿಧಾತ ಬಿರುದು ನೀಡಿ ಸನ್ಮಾನಿಸಲಾಯಿತು.

## ಇಂದು ಭೋಗಾವತಿ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವ.

ಯುವಮಾರ್ಗ ಸುದ್ದಿ

**ಮಾನ್ವಿ,,ನ.28–** ಇಂದು ಭೋಗಾವತಿ ಶ್ರೀಬಸವೇಶ್ವರ ರಾಮಲಿಂಗೇಶ್ವರ ಜಾತ್ರಾ ಮಹೋತ್ಸವ ಜರುಗಲಿದ್ದು ಸಂಜೆ 5.30 ನಿ.ಕ್ಕೆ ಅತ್ಯಂತ ವಿಜೃಂಬಣೆಯಿಂದ ರಥೋತ್ಸವ ಜರುಗುವುದು ಈ ಎಲ್ಲಾ ಭಕ್ತಿಪೂರ್ವಕ ಕಾರ್ಯಕ್ರಮದಲ್ಲು ಭೋಗಾವತಿ ಹಾಗೂ ಹಿರೇಕೊಟ್ನೆಕಲ್ ಮತ್ತು ಸುತ್ತಮುತ್ತಲಿನ ಗ್ರಾಮಗಳ ಅನೇಕ ಸಕಲ ಸದ್ಭಕ್ತರುಗಳು ಭಾಗವಹಿಸಿ ಶ್ರೀಬಸವೇಶ್ವರ ಕೃಪೆಗೆ ಪಾತ್ರರಾಗಬೇಕೆಂದು ಭೋಗಾವತಿ ಗ್ರಾಮದ ಸದ್ಭಕ್ತ ಮಂಡಳಿ, ಭೋಗಾವತಿ ಹಿರೇಕೊಟ್ನೆಕಲ್ ಹಾಗೂ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ಕೋರಿದ್ದಾರೆ.

ನ.29 ಶನಿವಾರ ಬೆಳಿಗ್ಗೆ 8.45 ನಿ.ಕ್ಕೆ ಶ್ರೀಮಾರುತಿ ದೇವಸ್ಥಾನದದಿಂದ ಶ್ರೀ ಬಸವೇಶ್ವರ ದೇವಸ್ಥಾನದವರೆಗೆ ಕಳಸಾರೋಹಣ ಸಕಲ ವಾದ್ಯಗಳೊಂದಿಗೆ ಮೆರವಣಿಗೆ ಮತ್ತು ರಥೋತ್ಸವಕ್ಕೆ ಪೂಜೆ ಮತ್ತು ಕಳಸಾರೋಹಣ ಕಾರ್ಯಕ್ರಮಗಳು ತದನಂತರ ಎಲೆಪೂಜೆ ಮತ್ತು ಗಂಡಾರತಿ, ದೀಡ್ ನಮಸ್ಕಾರ, ರುದ್ರಾಭಿಷೇಕ, ಪಂಚಾಭಿಷೇಕ ಮತ್ತು ರಾಶಿ ನಕ್ಷತ್ರ ಪೂಜೆ ಕಾರ್ಯಕ್ರಮ ಜರುಗುತ್ತವೆ. ಸಂಜೆ 5.30 ನಿ.ಕ್ಕೆ ಅತ್ಯಂತ ವಿಜೃಂಬಣೆಯಿಂದ ನೂತನ ಕಳಸಾರೋಹಣದೊಂದಿಗೆ



ರಥೋತ್ಸವ ನಡೆಯುತ್ತದೆ. ರಾತ್ರಿ 9.ಗಂ.ಗೆ ಭಕ್ತಾದಿಗಳಿಂದ ಭಜನಾ ಕಾರ್ಯಕ್ರಮ ನೆರವೇರಲಿದೆ.

ನ.30 ರವಿವಾರ ಸಾಯಂಕಾಲ ಕಡುಬಿನ ಕಾಳಗ ನಂತರ ಹೂ ಕಾಯಿ ಕರ್ಪೂರದೊಂದಿಗೆ ಮಹಾಮಂಗಲಗೊಳ್ಳುವುದು ಎಂದು ಆರ್ಚಕ ಬಸವರಾಜಪ್ಪ, ಭೋಗಾವತಿ ಗ್ರಾಮದ ಸದ್ಭಕ್ತ ಮಂಡಳಿ, ಭೋಗಾವತಿ ಹಿರೇಕೊಟ್ನೆಕಲ್ ಹಾಗೂ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ತಿಳಿಸಿದ್ದಾರೆ.

## ಡಿ.27 ರಿಂದ 3 ನೇ ಹಂತದ ಜಲಜಾಗೃತಿ–ಜನಜಾಗೃತಿ ನಿರ್ಮಲ ತುಂಗಭದ್ರಾ ಅಭಿಯಾನ ಪಾದಯಾತ್ರೆ




ಯುವಮಾರ್ಗ ಸುದ್ದಿ

**ಮಾನ್ವಿ,ನ.28–** ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ, ಪರ್ಯಾವರಣ ಟ್ರಸ್ಟ್ ಶಿವಮೊಗ್ಗ, ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಕರ್ನಾಟಕ ಸಂಯುಕ್ತಾಶ್ರಯದಲ್ಲಿ ಡಿ.27 ರಿಂದ ನಡೆಯಲಿರುವ ಕಿಷ್ಕಿಂದೆ ಯಿಂದ ಮಂತ್ರಾಲಯದವರೆಗೆ 3 ನೇ ಹಂತದ ಜಲಜಾಗೃತಿ –ಜನಜಾಗೃತಿ ನಿರ್ಮಲ ತುಂಗಭದ್ರಾ ಅಭಿಯಾನ ಪಾದಯಾತ್ರೆಯ ಭಿತ್ತಿ ಚಿತ್ರಗಳನ್ನು ಬಿಡುಗಡೆಗೊಳಿಸಿ ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ ಮಾತನಾಡಿ ಆಂಜನಾದ್ರಿ ಬೆಟ್ಟದಿಂದ ಪಾದಯಾತ್ರೆ ಪ್ರಾರಂಭವಾಗಿ ಮಂತ್ರಾಲಯದವರೆಗೆ ನಡೆಯಲಿದೆ ಮಂತ್ರಾಲ ಯದಲ್ಲಿ ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿ ಪವಾನ್ ಕಲ್ಯಾಣ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿ ದ್ದಾರೆ. ಮಾನ್ವಿ ತಾಲೂಕಿಗೆ ಪೋತ್ನಾಳ್ ನಿಂದ ಪಾಯಾತ್ರೆ ಪ್ರವೇಶ ಮಾಡಲಿದ್ದು ಹಿರೆಕೋಟ್ನೆಕಲ್ ನಲ್ಲಿ ವಾಸ್ತವ್ಯ ಹೂಡಲಿದ್ದರೆ. ಮಾನ್ವಿ ನಗರದಲ್ಲಿ ಪಾದಯಾತ್ರೆ ಸಾಗಿ ನೀರಮಾನ್ವಿಯಲ್ಲಿ ವಾಸ್ತವ್ಯ ಮಾಡಿ ನಂತರ ರಾಜೋಳಿ ಮೂಲಕ ಮಂತ್ರಾಲಯಕ್ಕೆ ಪಾದಯಾತ್ರೆ ತಲುಪಲಿದೆ ತಾಲೂಕಿಗೆ ಆಗಮಿಸುವ ಪಾದಯಾತ್ರೆಯಲ್ಲಿ ತಾಲೂಕಿನ ವಿವಿಧ ಮಠಗಳ ಶ್ರೀಗಳು, ಶಾಲಾ ಮಕ್ಕಳು, ವಿವಿಧ ಪಕ್ಷಗಳ ಜನಪ್ರತಿನಿದಿ ಗಳು,ಮುಖಂಡರು ,ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜನರಲ್ಲಿ ತುಂಗಭದ್ರಾನದಿಯ ಉಳಿವಿನ ಕುರಿತು ಜಾಗೃತಿ ಮೂಡಿಸಲಿದ್ದಾರೆ ಎಂದು ತಿಳಿಸಿದರು.

ರಾಷ್ಟ್ರೀಯ ಸ್ವಾಭಿಮಾನ ಅಂದೋಲನ ನವದೇಹಲಿಯ ದಕ್ಷಿಣ ಭಾರತ ಪ್ರಮುಖರಾದ ಸಿ.ಪಿ. ಮಾದವನ್ ಮಾತನಾಡಿ, ದೇಶದಲ್ಲಿ 70ಕ್ಕೂ ನದಿಗಳು ತೊಂದರೆಗೊಳಗಾಗಿವೇ, ದೇಶದ ಅತ್ಯಂತ ಪವಿತ್ರವಾದ ನದಿಗಳು ಕೂಡ ಕಲುಷಿತಗೊಳ್ಳುತ್ತಿವೆ, ಗಂಗಾ,ಯಮುನ,ನರ್ಮಾದ ಪಾಲ್ಗುಣಿ ನದಿಗಳನ್ನು ಸ್ವಚ್ಛಗೊಳಿಸ ಲಾಗುತಿದೆ,ನದಿಯ ನೀರು ಕುಲುಷಿತಗೊಳ್ಳುತ್ತಿರುವುದರಿಂದ ಕುಡಿಯುವುದಕ್ಕೆ ಯೋಗ್ಯವಾಗಿಲ್ಲ, ಪ್ರತಿ ವರ್ಷ 4ಕೋಟಿ ಜನರಿಗೆ ಇಂದು ಶುದ್ಧವಾದ ನೀರು ದೊರೆಯುತ್ತಿಲ್ಲ ರಾಜ್ಯದಲ್ಲಿ ತುಂಗಭದ್ರ,ಕಾವೇರಿ ನದಿಯ ನೀರು ಕೂಡ ಕಲುಷಿತ ಗೊಂಡು ಕುಡಿಯುವುದಕ್ಕೆ ಯೋಗ್ಯವಾಗಿಲ್ಲ ಎಂದು ವರದಿಗಳು ಹೇಳುತ್ತಿವೆ ಜನರಲ್ಲಿ ಕ್ಯಾನ್ಸರ್ ಮತ್ತು ಕಾಮಲೆ ರೋಗಗಳು ಹೆಚ್ಚಾಗಿ ವರದಿಯಾಗುತ್ತವೆ, ಅಂದರಿಂದ ನಮ್ಮ ತುಂಗಭದ್ರ ನದಿಯನ್ನು ಸ್ವಚ್ಚವಾಗಿಟ್ಟುಕೊಳ್ಳುವುದಕ್ಕೆ ನದಿಗೆ ಕಾರ್ಖನೆಗಳ ತ್ಯಜ್ಯ,ಕೃಷಿ ರಾಸಾಯನಿಕ ಸೇರದಂತೆ,ನಗರ ಪಟ್ಟಣಗಳ ತ್ಯಾಜ್ಯದ ನೀರು ನರವಾಗಿ ನದಿಗೆ ಬಿಡದಂತೆ ಸರ್ಕಾರಕ್ಕೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದಲ್ಲದೆ ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರಾಜ್ಯ ಸಂಚಲಕರಾದ ಬಾಲಕೃಷ್ಣ ನಾಯ್ಡು,ಜಿಲ್ಲಾ ಸಂಚಲಕಾರದ ಎನ್.ಉದಯಕುಮಾರ ಸಾಹುಕರ್, ಮಾನ್ವಿ ತಾ.ಸಂಚಲಕರಾದ ಅನಿತಾ ನವಲಕಲ್, ಸಿರವಾರ ಸಂಚಲಕರಾದ ನಗೇಶನಾಯಕ್, ಬಿಜೆಪಿ.ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗಾವತಿ, ಶಿವರಾಜ್ ನಾಯಕ, ಮಲ್ಲನಗೌಡ ನಕ್ಕುಂದಿ, ಶರಣಪ್ಪಗೌಡ ನಕ್ಕುಂದಿ,ಮಲ್ಲಯ್ಯಗಣೇಕಲ್,ಹರಿಹಾರ ಪಾಟೀಲ್, ರುದ್ರಗೌಡ,ಜೆ.ಸುಧಾಕರ್‌ಗುರುಸಿದ್ದಪ್ಪ ಗೌಡ ಕಣೂರು,ವಿಶ್ವನಾಥ ರಾಯಪ್ಪ ವಕೀಲರು,ಲಿಂಗರಾಜ ಗಡಿಗಿ,ನಾಗರಾಜ ಬಳಿಗಾರ, ಗೋಪಾಲ ಇಭ್ರಮಪುರ, ಕುಮಾರಸ್ವಾಮಿ ಮೇದಾ, ಜಯರಾಜ್, ಸೇರಿದಂತೆ ಇನ್ನಿತರರು ಇದ್ದರು.

## ಬೈಲ್ ಮರ್ಚೇಡ್: ಕರ್ನಾಟಕ ವೀರ ಸಮರ ಸಂಘದ ವತಿಯಿಂದ ಶಾಲಾ ಮಕ್ಕಳಿಗೆ ಶೂ,ಸಾಕ್ಸ್ ವಿತರಣೆ



ಯುವಮಾರ್ಗ ಸುದ್ದಿ

**ಮಾನ್ವಿ,ನ.28–** ತಾಲೂಕಿನ ಬೈಲ್ ಮರ್ಚೇಡ್ ಗ್ರಾಮದ ಸರ್ಕಾರಿ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಲ್.ಕೆ.ಜಿ.ಮತ್ತು ಯು.ಕೆ.ಜಿ.ಹಾಗೂ ಒಂದನೇ ತರಗತಿ ಮಕ್ಕಳಿಗೆ ಕರ್ನಾಟಕ ವೀರ ಸಮರ ಸಂಘದ ಅಧ್ಯಕ್ಷರಾದ ಮಲ್ಲನಗೌಡ ಮಾಲಿ ಪಾಟೀಲ ನೇತೃತ್ವದಲ್ಲಿ 82 ವಿದ್ಯಾರ್ಥಿಗಳಿಗೆ ಶೂ.ಮತ್ತು ಸಾಕ್ಸ್ ವಿತರಣೆ ಮಾಡಲಾಯಿತು.

ಬೈಲ್ ಮರ್ಚೇಡ್ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಕರ್ನಾಟಕ ವೀರ ಸಮಯ ಸಂಘದ ವತಿಯಿಂದ ಹಮ್ಮಿಕೊಂಡ 70 ನೇ ಕನ್ನಡ ರಾಜೋತ್ಸವ ದಿನಾಚರಣೆ ಅಂಗವಾಗಿ ಸರ್ಕಾರಿ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಎಲ್.ಕೆ.ಜಿ.ಮತ್ತು ಯು.ಕೆ.ಜಿ.ಹಾಗೂ ಒಂದನೇ ತರಗತಿ ಓದುತ್ತಿರುವ ಮಕ್ಕಳಿಗೆ ಶೂ.ಮತ್ತು ಸಾಕ್ಸ್ ವಿತರಣೆ ಮಾಡಿದರು.

ಈ ಕಾರ್ಯಕ್ರಮದ ಸಾನಿದ್ಯವನ್ನು ಪಂಡಿತ ಸ್ವಾಮಿ ವಹಿಸಿದ್ದು ಕರ್ನಾಟಕ ವೀರ ಸಮರ ಸಂಘದ ಅಧ್ಯಕ್ಷರಾದ ಮಲ್ಲನಗೌಡ ಮಾಲಿ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಕರ್ನಾಟಕ ವೀರ ಸಮರ ಸಂಘದ ತಾಲೂಕ ಅಧ್ಯಕ್ಷರಾದ ಮಲ್ಲನಗೌಡ ಮಾಲಿ ಪಾಟೀಲ್ ಬೈಲ್ ಮರ್ಚೇಡ್, ಗೌರವಾಧ್ಯಕ್ಷ ಅಫ್ರೋಜ್ ಸಾಹೇಬ್ , ಎಸ್.ಡಿ.ಎಂ.ಸಿ ಅಧ್ಯಕ್ಷರಾದ ವೀರೇಶ ನಾಯಕ ಖಾನಾಜಿ,ಶಾಲಾ ಮುಖ್ಯ ಶಿಕ್ಷಕ ಮುತ್ತಣ್ಣ, ಸುಂಕೇಶ್ವರ ಗ್ರಾಮ ಪಂಚಾಯತ ಅಧ್ಯಕ್ಷೆ ಪ್ರಭಾವತಿ ತಿಮ್ಮಯ ಬೈಲ್ ಮರ್ಚೇಡ್, ಹಿರಿಯ ಮುಖಂಡರಾದ ಯಲ್ಲಪ್ಪ ಬಂಗಾರಿ ಈರಣ್ಣ ಸುಂಕೇಶ್ವರ,ವಿಜಯ ಸುಂಕೇಶ್ವರ, ಮಲ್ಲಿಕಾರ್ಜು ರ್ನ ಚಲುವಾದಿ ಬೈಲ್ ಮರ್ಚೇಡ್ ,ಬಸನಗೌಡ ಮೇಟಿ, ವಿಜಯ್ ಕುಮಾರ್ ಸುಂಕೇಶ್ವರ, ಶಶಿಕುಮಾರ ಕೊಟ್ನೆಕಲ್, ಆಲಂ ಪಾಷಾ , ಸಂಕಲ್ಪ ವಿಕಲಚೇತನರ ಸಂಘದ ಅಧ್ಯಕ್ಷ ಶಿವುಕುಮಾರ ಚಲ್ಮಲ್, ,ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷ ಸುಗೂರಪ್ಪ ಗೌಡ ದಳಪತಿ, ಬಂದೇನವಾಜ್ ಶಿವರಾಯ ನಾಯಕ, ಎಸ್.ಡಿ. ಎಂ.ಸಿ ಉಪಾಧ್ಯಕ್ಷ ವೆಂಕಟೇಶ, ಅಪ್ಪು ಸಂಘ ತಾಲೂಕ ಅಧ್ಯಕ್ಷ ರೇಣುಕಾ ರಾಜ ಶರಣಪ್ಪ ಸಾಹುಕಾರ ,ಶೇಖರ ನಾಯಕ, ವಾಮನಗೌಡ,ಹನುಮೇಶ ನಾಯಕ ,ಮೌನೇಶ್ ನಾಯಕ ಸುರೇಶ ಬಿವಿಎಸ್ ,ಸಿದ್ಧಪ್ಪ ನಾಯಕ, ಯಲ್ಲಪ್ಪ ನಾಯಕ ಖಾನಾಜಿ,ಸೇರಿದಂತೆ ಸರ್ಕಾರಿ ಉನ್ನತೀಕರಿ ಸಿದ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು, ಸಿಬ್ಬಂದಿಗಳು, ಊರಿನ ಅನೇಕ ಮುಖಂಡರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಹಕಾರ ಸಪ್ತಾಹ...ಒಂದು ವಿಶ್ಲೇಷಣೆ

**ಸಹಕಾರ ಎಂಬ ಪದವೇ ಎಷ್ಟು ಚಂದ ಅಲ್ಲವೇ!**

ಪ್ರತಿ ಹಳ್ಳಿ, ಪ್ರತಿ ಪಟ್ಟಣಗಳಲ್ಲಿ ಪರಸ್ಪರರ ಸಹಕಾರದಿಂದ ಮದುವೆ, ಮುಂಜಿ, ಜಾತ್ರೆ, ಉತ್ಸವ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ಇಂತಹ ಎಲ್ಲ

ಕಾರ್ಯಕ್ರಮಗಳಲ್ಲಿ ಪ್ರತಿಯೊಬ್ಬರೂ ತಮ್ಮ

ಶಕ್ತ್ಯಾನುಸಾರ ಸೇವೆ ಸಲ್ಲಿಸುತ್ತಿದ್ದರು.ಒಬ್ಬೊಬ್ಬರು ಒಂದೊಂದು ಕೆಲಸಗಳ ಉಸ್ತುವಾರಿಯನ್ನು ವಹಿಸಿಕೊಳ್ಳಲು ಅನುಕೂಲವಾಗುವಂತೆ ಸಮಿತಿಯನ್ನು ರಚಿಸಿ ಅದಕ್ಕೆ ಅಧ್ಯಕ್ಷ ಉಪಾಧ್ಯಕ್ಷ ಕಾರ್ಯದರ್ಶಿ ಖಜಾಂಚಿ ಹಾಗೂ ಉಳಿದ ಸದಸ್ಯರನ್ನು

ಆಯ್ಕೆ ಮಾಡಿ ಅವರ ಮೂಲಕ ಎಲ್ಲ ಕಾರ್ಯಕ್ರಮಗಳು ಸುಸೂತ್ರವಾಗಿ ಸಾಗುವಂತೆ ನಿರ್ವಹಣೆಯನ್ನು ವಹಿಸುತ್ತಿದ್ದರು.... ಹೀಗೆ ಮಾಡುವ ಮೂಲಕ ಸಂಘಟಿತರಾಗಿ ಕಾರ್ಯನಿರ್ವಹಿಸುವ, ಸೇವೆಯನ್ನು ಸಲ್ಲಿಸಲು ದೊರೆತ ಅವಕಾಶವೆಂದು ಭಾವಿಸುತ್ತಿದ್ದರು. ನಾಯಕತ್ವ ಗುಣ ಬೆಳೆಯಲು ಸಹಕಾರಿಯಾಗುವ ಈ ಸಮಿತಿಗಳು ಸಹಕಾರ ತತ್ವವನ್ನು ಪ್ರತಿಪಾದಿಸುತ್ತಿದ್ದವು.

ಹತ್ತು ಹಲವು ಭಿನ್ನಾಭಿಪ್ರಾಯಗಳಿದ್ದರೂ ಒಳನೋಟಗಳಿದ್ದರೂ ಕೂಡ ಒಂದು ನಿಶ್ಚಿತ ಉದ್ದೇಶಕ್ಕಾಗಿ ದುಡಿಯುವ ಕಾರ್ಯ ನಿರ್ವಹಿಸುವ ಈ ಸಹಕಾರ ತತ್ವವು ಯಾವುದೇ ರೀತಿಯ ಕಾರ್ಯಕ್ರಮದ ಯಶಸ್ಸಿಗೆ ಮುನ್ನುಡಿ ಬರೆಯುತ್ತದೆ ಎಂಬುದು ನಮ್ಮ ಹಿರಿಯರಿಗೆ ಅನುಭವ ವೇದ್ಯವಾಗಿತ್ತು. ಇಂತಹ ಸಂಘಟಿತ ಕಾರ್ಯಕ್ರಮಗಳ ಯಶಸ್ಸಿನ ಪ್ರೇರಣೆಯಿಂದಲೇ ಬಹುಶಃ ಸಹಕಾರ ತತ್ವವು ಹುಟ್ಟಿಕೊಂಡಿರಬಹುದು.

ಸಹಕಾರ ತತ್ವದ ಮೂಲ ಉದ್ದೇಶವೇ ಗ್ರಾಮೀಣ ಜನರ ಆರ್ಥಿಕ, ಸಾಮಾಜಿಕ ಬಲವರ್ಧನೆ. ಸಹಕಾರ ವ್ಯವಸ್ಥೆಯು ಬಹುಮುಖ ವಲಯವಾಗಿದ್ದು ಜನಸಾಮಾನ್ಯರು ಈ ವಲಯಗಳ ಮೇಲೆ ಅವಲಂಬಿತರಾಗಿದ್ದಾರೆ. ದೇಶದಾದ್ಯಂತ ಅರ್ಬನ್ ಬ್ಯಾಂಕುಗಳು, ಪತ್ತಿನ ಸಹಕಾರ ಸಂಸ್ಥೆಗಳು, ನೇಕಾರರು, ಬ್ಯಾಂಕಿಂಗ್, ರಸಗೊಬ್ಬರ, ಸಕ್ಕರೆ, ಹೈನುಗಾರಿಕೆ ಮಾರುಕಟ್ಟೆ, ಗ್ರಾಹಕ ಉತ್ಪನ್ನಗಳು, ಕರಕುಶಲ ವಸ್ತುಗಳು, ಮೀನುಗಾರಿಕೆ, ಬುಡಕಟ್ಟು ಅಭಿವೃದ್ಧಿ, ಕಾರ್ಮಿಕ ವಸತಿ ಹಾಗೂ ಇನ್ನಿತರ ವಲಯಗಳಲ್ಲಿ ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸುತ್ತದೆ.

ಕೇವಲ ಹಣಕಾಸು ಕ್ಷೇತ್ರಕ್ಕೆ ಸೀಮಿತವಾಗದೆ ಸಹಕಾರ ಕ್ಷೇತ್ರವು ಕೃಷಿ, ನೇಕಾರಿಕೆ, ಕರಕುಶಲ ವಸ್ತುಗಳ ತಯಾರಿಕೆ ಹಾಗೂ ಮಾರಾಟ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.ಎಲ್ಲರೂ ಪರಸ್ಪರ ಸಹಕಾರದಿಂದ ನಿಶ್ಚಿತ ಕಾರ್ಯದ ಉದ್ದೇಶವನ್ನು ಸಫಲವಾಗುವಂತೆ ಮಾಡುವುದು ಸಹಕಾರ ತತ್ವದ ಉದ್ದೇಶ 50 ವರ್ಷಗಳ ಹಿಂದೆ ಭಾರತ ದೇಶದಲ್ಲಿ ಈ ಸಹಕಾರ ತತ್ವವನ್ನು ಮತ್ತಷ್ಟು ವ್ಯವಸ್ಥಿತವಾಗಿ ಮಾಡುವ ಮೂಲಕ ರೈತರ ಬ್ಯಾಂಕಿಂಗ್ ವ್ಯವಹಾರಗಳ ಸಾರ್ವಜನಿಕ ಸೇವೆಯ 10 ಹಲವು ವ್ಯವಹಾರಗಳನ್ನು ನಿರ್ವಹಿಸಲು ಅನುವಾಗುವಂತೆ ಸಹಕಾರ ತತ್ವವನ್ನು ರೂಪಿಸಲಾಯಿತು

ಸಹಕಾರ ತತ್ವದ ಅಡಿಯಲ್ಲಿ ರಚನೆಯಾಗುವ ಸಂಘ ಸಂಸ್ಥೆಗಳು ಯಾವುದೇ ರೀತಿಯ ವರ್ಗ,–ವರ್ಣ, ಲಿಂಗ, ಧರ್ಮ ಮುಂತಾದ ಭೇದಗಳಿಂದ ದೂರವಾದ ಕೇವಲ ತಮ್ಮ ಸ್ವಸಾಮರ್ಥ್ಯದ ಮೂಲಕ ಸಾಮಾಜಿಕ ಅಭಿವೃದ್ಧಿಗೆ ಕಿರು ಕಾಣಿಕೆಯನ್ನು ನೀಡಲು ಬಯಸುವ ಜನರನ್ನು ಒಳಗೊಂಡ ಸ್ವಯಂ ಸೇವಾ ಸಂಸ್ಥೆಯಾಗಿ ಕಾರ್ಯನಿರ್ವಹಿಸಲೇಬೇಕು.

ಪ್ರಜಾಪ್ರಭುತ್ವದ ತಳಹದಿಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ಈ ಸಂಸ್ಥೆಯ ಎಲ್ಲಾ ಕಾರ್ಯ ಚಟುವಟಿಕೆಗಳು ಕಾನೂನು ಬದ್ಧವಾಗಿ ಸ್ಥಾಪಿಸಲ್ಪಟ್ಟಿದ್ದು ಎಲ್ಲ ಕಾರ್ಯ ಚಟುವಟಿಕೆಗಳು ಸಂಸ್ಥೆಯ ಅಧೀನದಲ್ಲಿ ಇದ್ದು ಸಂಸ್ಥೆಯ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕು ಹಾಗೂ ಇಂತಹ ಸಂಸ್ಥೆಗಳಿಗೆ ಖಾಯಂ ಸದಸ್ಯರು ಅಲ್ಲದೆ ಚುನಾಯಿತ ಪ್ರತಿನಿಧಿಗಳನ್ನು ಹೊಂದುವ ಅವಕಾಶ ಇರುತ್ತದೆ. ಸದಸ್ಯರು ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಸಮ ಪ್ರಮಾಣದ ಅಧಿಕಾರ ಮತ್ತು ಸಮ ಪ್ರಮಾಣದ ಹಣ ಹೂಡಿಕೆಯನ್ನು ಹೊಂದಿರುತ್ತಾರೆ. ಸಂಸ್ಥೆಯ ಆರ್ಥಿಕ ಚಟುವಟಿಕೆಗಳ ಹೆಚ್ಚುವರಿ ಲಾಭವನ್ನು ಸಂಸ್ಥೆಯ ಮುಂದಿನ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸಂಸ್ಥೆಯ ಒಡೆತನಕ್ಕೆ ಬಿಡಲಾಗುತ್ತದೆ. ಸಮಾನ ಅಧಿಕಾರವನ್ನು ಹೊಂದಿದ್ದರೂ ಕೂಡ ಅವರು ಹೂಡಿರುವ ಹಣವನ್ನು ಗೌಣವೆಂದು ಪರಿಗಣಿಸಲಾಗುತ್ತದೆ.

ಸಹಕಾರ ಸಂಸ್ಥೆಗಳು ವಿವಿಧ ಸಂಘ ಸಂಸ್ಥೆಗಳ ಜೊತೆ ಹಾಗೂ ಸರಕಾರದ ಜೊತೆ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ಸಹಕಾರ ತತ್ವದ ಕಾರ್ಯ ನಿರ್ವಹಣೆಯಾಗುತ್ತದೆ. ತಮ್ಮ ಔದ್ಯೋಗಿಕ, ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ನಡೆಸಲು ಈ ರೀತಿಯ ಒಪ್ಪಂದಗಳು ಮಾನ್ಯ ಮಾಡಲ್ಪಟ್ಟಿದ್ದು ಪ್ರಜಾಪ್ರಭುತ್ವದ ನಿಯಮಾವಳಿಗಳ ತಳಹದಿಯ ಮೇಲೆ ಇವು ರೂಪುಗೊಂಡಿರುತ್ತವೆ. ಸಹಕಾರ ತತ್ವದ ಅಡಿಯಲ್ಲಿ ಇರುವ ಸಂಸ್ಥೆಗಳ ಸ್ವಾಯತ್ತತೆಗೆ ಯಾವುದೇ ರೀತಿಯ ಧಕ್ಕೆ ಬರದಂತೆ ಕಾರ್ಯನಿರ್ವಹಿಸುವುದು ಕಡ್ಡಾಯ.

ಸಂಸ್ಥೆಯ ಅಭಿವೃದ್ಧಿ ಕಾರ್ಯದಲ್ಲಿ ಪಾಲ್ಗೊಳ್ಳಲು ಅವಶ್ಯಕವಾದ ತರಬೇತಿಯನ್ನು ಸದಸ್ಯರು ಪಡೆದುಕೊಳ್ಳಲೇಬೇಕು. ಸಹಕಾರ ತತ್ವದ ಅಡಿಯಲ್ಲಿ ನಡೆಯುವ ಕಾರ್ಯಕ್ರಮಗಳು ವಿಶೇಷವಾಗಿ ಯುವ ಜನರಿಗೆ ಹಾಗೂ ಭವಿಷ್ಯದ ನಾಗರಿಕರಿಗೆ ಸಹಕಾರ ತತ್ವದ ಪಾಲನೆಯ ಮೂಲಕ ಉತ್ತಮ ಔದ್ಯೋಗಿಕ, ಶೈಕ್ಷಣಿಕ ಬದುಕನ್ನು ಕಟ್ಟಿಕೊಳ್ಳಲು ಸಹಾಯ ಹಸ್ತವನ್ನು ಚಾಚುತ್ತದೆ.

ಸಹಕಾರ ಸಂಸ್ಥೆಗಳು ಸ್ಥಳೀಯವಾಗಿ, ಪ್ರಾದೇಶಿಕವಾಗಿ ರಾಜ್ಯ ಮತ್ತು ರಾಷ್ಟ್ರೀಯ ಸಂಸ್ಥೆಗಳಾಗಿ ಏಕಮೇವಾಧಿಪತ್ಯ ಇಲ್ಲವೇ ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯ ನಿರ್ವಹಿಸಬಹುದು.

ಸುಸ್ಥಿರವಾದ ಸಾಮಾಜಿಕ ಅಭಿವೃದ್ಧಿಯು ಸಹಕಾರ ತತ್ವದ ಮೂಲ ಪರಿಕಲ್ಪನೆಯಾಗಿದ್ದು ಪರಸ್ಪರರಿಗೆ ಸಹಾಯ ಮಾಡುವ ಮೂಲಕ ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದುವುದು ಸಹಕಾರ ತತ್ವದ ಮೂಲ ಮಂತ್ರವಾಗಿದೆ.

ಸಹಕಾರ ತತ್ವದ ಅಡಿಯಲ್ಲಿ ಕಾರ್ಯನಿರ್ವಹಿಸುವ ಮೂಲಕ ದೇಶದ ಸರ್ವಾಂಗೀಣ ಪ್ರಗತಿಗೆ ಬಹುಮೂಲ್ಯ ಕಾಣಿಕೆಯನ್ನು ನೀಡಬಹುದು. ಪ್ರತಿಯೊಂದು ವಲಯದಲ್ಲಿ ಸಹಕಾರಿ ಕ್ಷೇತ್ರದ ಹಸ್ತಕ್ಷೇಪವಿದ್ದು ಸಹಕಾರ ಕ್ಷೇತ್ರದಲ್ಲಿ ಪಕ್ಷಾತೀತವಾಗಿ ಜಾತ್ಯತೀತವಾಗಿ ಕಾರ್ಯನಿರ್ವಹಿಸಲೇಬೇಕು. ಆತ್ಮ ನಿರ್ಭರ ಭಾರತದ ಸಾಧನೆಗೆ ಸಹಕಾರಿ ಸಂಸ್ಥೆಗಳು ಪ್ರಬಲ ಅಸ್ತ್ರವಾಗಿ ಕಾರ್ಯನಿರ್ವಹಿಸುತ್ತಿವೆ.

ಸುಮಾರು 75 ವರ್ಷಗಳ ಹಿಂದೆಯೇ ಮೊದಲು ಮುಂಬೈ ಪ್ರಾಂತ್ಯದಲ್ಲಿ ಸರ್ಕಾರ ಸಂಸ್ಥೆಯ ಆಶಯದಲ್ಲಿ 10 ಹಲವು ಗಿರಣಿಗಳು ಹತ್ತಿ ನಿಲ್ಲುಗಳು ಆರಂಭಗೊಂಡಿದ್ದವು. ಅದರಲ್ಲೂ ಕರ್ನಾಟಕ ರಾಜ್ಯದ ನಮ್ಮ ಗದಗ ಜಿಲ್ಲೆಯ ಕಣಗಿನ ಹಾಳದಲ್ಲಿ ಸಹಕಾರ ಕ್ಷೇತ್ರದ ಮೊದಲ ಸಂಸ್ಥೆಯನ್ನು ಕಟ್ಟಿದವರು ಸಿದ್ದನಗೌಡ ಪಾಟೀಲರು. ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ರೈತರ ಕೃಷಿ ಚಟುವಟಿಕೆಗಳಿಗೆ ಆರ್ಥಿಕವಾಗಿ ನೆರವಾಗಲು 1905ರಲ್ಲಿ ಗದಗ್ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘವನ್ನು ಸ್ಥಾಪಿಸಿದ ಸಿದ್ದನಗೌಡ ಪಾಟೀಲ್ ರವರು ಏಷ್ಯಾದ ಸಹಕಾರ ಪಿತಾಮಹ ಎಂದೆನಿಸಿಕೊಂಡರು. ರೈತರಿಗೆ ಸಣ್ಣ ಪ್ರಮಾಣದ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದ್ದ ಸಹಕಾರ ಕ್ಷೇತ್ರ ಇಂದು ಜೀವನಕ್ಕೆ ಅಗತ್ಯವಿರುವ ವಸ್ತುಗಳನ್ನು ಪೂರೈಸುವ ಮಟ್ಟಕ್ಕೆ ಅಭಿವೃದ್ಧಿಯಾಗಿದೆ.ಅದರಂತೆಯೇ ಕರ್ನಾಟಕದಲ್ಲಿ ಸಹಕಾರ ಕ್ಷೇತ್ರಕ್ಕೆ ಗಟ್ಟಿಯಾದ ಅಡಿಪಾಯವನ್ನು ಹಾಕಿಕೊಟ್ಟವರು ಹುಲಕೋಟಿಯ ಹುಲಿ ಎಂದೇ ಹೆಸರಾದ ದಿವಂಗತ ಕೆ.ಹೆಚ್.ಪಾಟೀಲರು.

ಸಹಕಾರಿ ಕ್ಷೇತ್ರದ ಮೂಲಕ ಜನಸಾಮಾನ್ಯರ ಬದುಕು ಹಸನಾಗುತ್ತದೆ ನೈಜ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಬಹುದು ಎಂಬ ಉದಾತ್ತ ಚಿಂತನೆಯ ಫಲವಾಗಿ ವಾಮನನಾಗಿ ಅಂಬೆಗಾಲಿಟ್ಟ ಸಹಕಾರ ಕ್ಷೇತ್ರ ಇದೀಗ ತ್ರಿವಿಕ್ರಮವಾಗಿ ಬೆಳೆದಿದ್ದು ಆರ್ಥಿಕ, ಸಾಮಾಜಿಕ, ಹಿಂದುಳಿದವರ, ಬಡವರ ಹಾಗೂ ಮಹಿಳೆಯರ ಆಧಾರ ಸ್ತಂಭವಾಗಿ ಬೆಳೆದಿದೆ.

"ಸಹಕಾರದಿಂದ ಸಮೃದ್ಧಿ" ಎಂಬ ದೃಷ್ಟಿಕೋನಕ್ಕೆ ಅನುಗುಣವಾಗಿ ಸಹಕಾರಿ ಸಂಸ್ಥೆಗಳು ತಾಂತ್ರಿಕ ಹಾಗೂ ನಿರ್ವಹಣ ಶಿಕ್ಷಣದಲ್ಲಿ ಕೂಡ ಪರಿಣತಿಯನ್ನು ಪಡೆಯುತ್ತಿವೆ.

ಪ್ರತಿ ಹಳ್ಳಿಗಳಲ್ಲಿ ಕೃಷಿ ಪತ್ತಿನ ಸಹಕಾರಿ ಬ್ಯಾಂಕುಗಳು, ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ಗೊಬ್ಬರ ಹಾಗೂ ಬೀಜದ ಮಾರಾಟ ಕೇಂದ್ರಗಳು ಹಾಲು ಒಕ್ಕೂಟ, ಸಹಕಾರಿ ಶಿಕ್ಷಣ ಸಂಸ್ಥೆಗಳು ಮುಂತಾದ ಅತಿ ದೊಡ್ಡ ಸಂಸ್ಥೆಗಳು ಇಂದಿಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಕಾರಣ ಅವುಗಳ ಹಿಂದಿರುವ ಸಹಕಾರ ತತ್ವದ ನಿಖರ ಪರಿಪಾಲನೆ. ಸಹಕಾರದಲ್ಲಿ ಸಂಘಟನೆ ಮತ್ತು ಸಂಘಟನೆಯಲ್ಲಿ ಸಹಕಾರ ತತ್ವಗಳು ಮಿಳಿತಗೊಂಡಿವೆ.

ದೇಶದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಪ್ರಗತಿಗೆ ಸಹಕಾರ ಸಂಸ್ಥೆಗಳ ಅವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ವಿದ್ಯಾರ್ಥಿಗಳಿಗೆ, ಈ ದೇಶದ ನಾಗರಿಕರಿಗೆ ಸಾಂಘಿಕತೆಯಲ್ಲಿರುವ ಸಹಕಾರ ತತ್ವದ ಶಕ್ತಿಯ ಅರಿವನ್ನು ಮೂಡಿಸೋಣ.

**ವೀಣಾ ಹೇಮಂತಗೌಡ ಪಾಟೀಲ್**
**ಮುಂಡರಗಿ, ಗದಗ್**

## ಮಹಾಂತೇಶ ಬೀಳಗಿಗೆ ಶ್ರದ್ಧಾಂಜಲಿ

**ಕಲಬುರಗಿ,ನ.28–** ಇತ್ತೀಚೆಗೆ ವಾಹನ ಅಪಘಾತದಲ್ಲಿ ನಿಧನರಾದ ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ ಬೀಳಗಿ ಮತ್ತು ಸಹೊದರರಿಗೆ ಜಿಲ್ಲಾ ಬಣಗಾರ ಸಮಾಜದ ವತಿಯಿಂದ ಶಂಕರಲಿಂಗ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ವೀರಭದ್ರ ಸಿಂಪಿ ಅವರು, ಸಣ್ಣ ವ್ಯಾಪಾರ ಮಾಡುತಿದ್ದ ತಂದೆ ಶಿವಬಸಪ್ಪನವರು ಮರಣ ನಂತರ ಬೀಳಗಿ ಅವರು ಅಂಗಡಿಯಲ್ಲಿ ಚೀಟಿಕಟ್ಟಿ, ಜಾತ್ರೆಗಳಲ್ಲಿ ತೆಂಗು, ಕಾರಿಕ ಮಾರಿ, ತಾಯಿಯ ವಿಧುವಾ ವೇತನದಿಂದ ಕಷ್ಟಪಟ್ಟು ಓದಿ ಬಡತನವನ್ನು ಮೆಟ್ಟಿ ಪರಿಶ್ರಮದಿಂದ ಸಾಧನೆ ಮಾಡಿದ್ದರು. ಶ್ರದ್ಧೆ ಮತ್ತು ಪರಿಶ್ರಮದಿಂದ ಬಡತನವನ್ನು ಮೆಟ್ಟಿನಿಂತು ಯುವ ಜನತೆಗೆ ಮಾರ್ಗದರ್ಶಿಯಾಗಿದ್ದ ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ ಬಿಳಗಿಯವರ ನಿಧನದಿಂದ ನಾಡಿಗೆ ಅಪಾರ ನಷ್ಟವಾಗಿದೆ ಎಂದರು. ಜಿಲ್ಲಾ ಬಣಗಾರ ಸಮಾಜದ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

## ಸಂವಿಧಾನದಲ್ಲಿ ಸಮಾಜದ ಎಲ್ಲಾರಿಗೂ ಕೂಡ ಸಮಾನವಾದ ಹಕ್ಕುಗಳನ್ನು ನೀಡಲಾಗಿದೆ:ರವಿಕುಮಾರ



**ಯುವಮಾರ್ಗ ಸುದ್ದಿ**

**ಮಾನ್ವಿ,ನ.28–** ತಾಲೂಕಿನ ಪೋತ್ನಾಳ್ ಗ್ರಾಮದ ಗ್ರಾಮ ಪಂಚಾಯಿತಿ ಆವರಣದಲ್ಲಿ ಗ್ರಾಮ ಪಂಚಾಯಿತಿ ಹಾಗೂ ಜಾಗೃತ ಮಹಿಳಾ ಸಂಘಟನೆ ಸಂಯುಕ್ತಾಶ್ರಯದಲ್ಲಿ ನಡೆದ ಸಂವಿಧಾನ ಕಡೆ ನಮ್ಮ ನಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ನ್ಯಾಯವಾದಿಗಳಾದ ರವಿಕುಮಾರ ಮಾತನಾಡಿ ಡಾ.ಬಿ.ಆರ್.ಅಂಬೇಡ್ಕರ್ ರವರು ಸಂವಿಧಾನದಲ್ಲಿ ಸಮಾಜದ ಎಲ್ಲಾರಿಗೂ ಕೂಡ ಸಮಾನವಾದ ಹಕ್ಕುಗಳನ್ನು ನೀಡಿದ್ದಾರೆ. ಹಾಗೂ ಮಹಿಳೆಯರಿಗೆ ಸಮಾನತೆ, ಸ್ವಾಭಿಮಾನದ ಬದುಕನ್ನು ಬದುಕುವ ಹಕ್ಕುಗಳನ್ನು ಕಲ್ಪಿಸಿದ್ದಾರೆ. ಮಹಿಳೆಯರ ಮೇಲೆ ದೌರ್ಜನ್ಯವಾದಾಗ, ಲಿಂಗ ತಾರತಮ್ಯ ನಡೆದಾಗ ರಕ್ಷಣೆಯನ್ನು ಪಡೆಯುವುದಕ್ಕಾಗಿ ಸಂವಿಧಾನದಲ್ಲಿ ಅನೇಕ ಕಾನೂನುಗಳನ್ನು ರೂಪಿಸಲಾಗಿದೆ ಅವುಗಳ ಬಗ್ಗೆ ಮಾಹಿತಿಯನ್ನು ಪಡೆದಾಗ ಮಾತ್ರ ಮಹಿಳೆಯರು ಕಾನೂನಿನ ರಕ್ಷಣೆ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಉದ್ದೇಶದಿಂದ ಸಂವಿಧಾನ ಕಡೆ ನಮ್ಮ ನಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಪೋತ್ನಾಳ್ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ಅಧಿಕಾರಿಡಾ.ಶರಣಪ್ಪ ಡಾ.ಗುರು ರೆಡ್ಡಿ,ಮಾತನಾಡಿದರು

ಪೋತ್ನಾಳ ಗ್ರಾಮ ಪಂಚಾಯತಿನ ಅಧ್ಯಕ್ಷೆ ಲಕ್ಷ್ಮೀ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಆಶಾ, ಜಾಗೃತ ಮಹಿಳಾ ಸಂಘಟನೆ ಅಧ್ಯಕ್ಷೆ ಚಿನ್ನಮ್ಮ ,ಶಾರದಾ ಗ್ರಾ.ಪಂ. ಕಾರ್ಯದರ್ಶಿ ಬಸವರಾಜ್,ಗ್ರಾಮ ಲೆಕ್ಕಾಧಿಕಾರಿ ಅಂಬಮ್ಮ ಸೇರಿದಂತೆ ನೂರಾರು ಮಹಿಳೆಯರು ಗ್ರಾ.ಪಂ. ಸಿಬ್ಬಂದಿಗಳು .ಸಾರ್ವಜನಿಕಕರು ಭಾಗವಹಿಸಿದ್ದರು

## ಇಂದು ಮಾನ್ವಿಯಲ್ಲಿ ಶಿಕ್ಷಕರ ದಿನಾಚರಣೆ: ನಾಲ್ವರು ಶಿಕ್ಷಕರಿಗೆ 5 ಗ್ರಾಂ ಚಿನ್ನದ ಪದಕ ವಿತರಣೆ

**ಯುವಮಾರ್ಗ ಸುದ್ದಿ**

**ಮಾನ್ವಿ,ನ.28–** ತಾಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ಇಂದು 2025 ರಂದು ಮಾನ್ವಿ ನಗರದ ಕರಡಿಗುಡ್ಡ ರಸ್ತೆಯಲ್ಲಿರುವ ಈದ್ಗಾ ಫಂಕ್ಷನ್ ಹಾಲ್‌ನಲ್ಲಿ ಶಿಕ್ಷಕರ ದಿನಾಚರಣೆ ಹಾಗೂ ಪ್ರತಿಭಾವಂತ ಶಿಕ್ಷಕರಿಗೆ ಚಿನ್ನದ ಪದಕ ವಿತರಣಾ ಸಮಾರಂಭವನ್ನು ಆಯೋಜಿಸಲಾಗಿದೆ. ಷ:ಬ್ರ: ಶ್ರೀ ವಿರುಪಾಕ್ಷ ಪಂಡಿತಾರಾಧ್ಯ ಮಹಾಸ್ವಾಮಿಗಳು, ಕಲ್ಮಠ, ಮಾನ್ವಿ ಇವರು ಸಮಾರಂಭದ ಸಾನಿಧ್ಯ ವಹಿಸಲಿದ್ದು, ಸಚಿವರಾದ ಎನ್.ಎಸ್ ಬೋಸ್ ರಾಜು ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಹಂಪಯ್ಯ ನಾಯಕ ಸೌಕಾರ್ ಅವರು ಉಪಸ್ಥಿತರಿದ್ದು, ನಾಲ್ಕು ಜನ ಶಿಕ್ಷಕರಿಗೆ ತಲಾ ಐದು ಗ್ರಾಂ ಚಿನ್ನದ ಪದಕಗಳನ್ನು ವಿತರಿಸುವ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಎಚ್. ಶರ್ಫುದ್ದೀನ್ ಪೋತ್ನಾಳ್ ಅವರು ವಹಿಸಿಕೊಳ್ಳಲಿದ್ದಾರೆ.

ಬೆಳಿಗ್ಗೆಯಿಂದಲೇ ಶಿಕ್ಷಕರಿಗಾಗಿ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು, ಸಾರ್ವಜನಿಕ ಕಾರ್ಯಕ್ರಮದ ಉದ್ಘಾಟನೆಯು ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ನಡೆಯಲಿದೆ ಎಂದು ಒಕ್ಕೂಟದ ಅಧ್ಯಕ್ಷರಾದ ಎಚ್. ಶರ್ಫುದ್ದೀನ್ ಪೋತ್ನಾಳ್ ತಿಳಿಸಿದರು.

## ಹಸಮಕಲ್ ಶಾಲೆಗೆ ಎಸ್‌ಡಿಎಂಸಿ ನೂತನ ಪದಾಧಿಕಾರಿಗಳ ನೇಮಕ



**ಯುವಮಾರ್ಗ ಸುದ್ದಿ**

**ಮಸ್ಕಿ,ನ.28–** ತಾಲ್ಲೂಕಿನ ಹಸಮಕಲ್ ಗ್ರಾಮದ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೇಲ್ವಿಸ್ತುವಾರಿ ಸಮಿತಿಯ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಶಾಲೆ ಮುಖ್ಯ ಶಿಕ್ಷಕ ಅಮರೇಶ ಗುಡದೂರ ತಿಳಿಸಿದರು.

ಶಾಲೆಯಲ್ಲಿ ಶುಕ್ರವಾರ ವಿದ್ಯಾರ್ಥಿಗಳ ಪಾಲಕ, ಪೋಷಕರ ಸಭೆ ನಡೆಸಿ ಸಭೆಯಲ್ಲಿ 2025–26ನೇ ಸಾಲಿನಿಂದ 3 ವರ್ಷದವರೆಗೆ ದುರುಗಪ್ಪ ನರಸಪ್ಪ (ಅಧ್ಯಕ್ಷರಾಗಿ), ನಾಗರತ್ನ ಮಂಜುನಾಥ (ಉಪಾಧ್ಯಕ್ಷರಾಗಿ), ಶಿವಮ್ಮ, ನಾಗರಾಜ ಭೋವಿ, ಫಕೀರ ಸ್ವಾಮಿ, ರಜಿಯಾಬೇಗಂ, ಲತಾಶ್ರೀ, ವಿಶ್ವನಾಥ, ನಿರುಪಾದಿ, ಶಾಂತಮ್ಮ, ದುರುಗೇಶ, ದೇವರಡ್ಡಿ, ಬಸವರಾಜ, ಪಾರ್ವತಮ್ಮ, ಸಿದ್ದಮ್ಮ, ಗಂಗಮ್ಮ, ಗ್ಯಾನಪ್ಪ, ಪ್ರೇಮಾ (ಸದಸ್ಯರು) ಗಳನ್ನಾಗಿ ನೇಕಮ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಹ ಶಿಕ್ಷಕರಾದ ಸುಮಂಗಲಾ, ಯಲ್ಲಮ್ಮ, ಸತ್ಯಮಣಿ, ಪವಿತ್ರಾ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಹುಲಗಪ್ಪ, ಯಂಕಪ್ಪ, ವೀರಭದ್ರಯ್ಯ ಸ್ವಾಮಿ ಸೇರಿದಂತೆ ವಿದ್ಯಾರ್ಥಿಗಳು ಮತ್ತು ಪಾಲಕರಿದ್ದರು.

## ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕರಡು ಮತದಾರರ ಪಟ್ಟಿ ಪ್ರಕಟ

**ರಾಯಚೂರು,ನ.28–** ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕರಡು ಮತದಾರರ ಪಟ್ಟಿಯನ್ನು ಪ್ರಚುರಪಡಿಸುವುದಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನವೆಂಬರ್ 27ರಂದು ರಾಜಕೀಯ ಪಕ್ಷಗಳ ಪ್ರತಿನಿಗಳೊಂದಿಗೆ ಸಭೆ ನಡೆಯಿತು.

ಈ ವೇಳೆ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳು, ಭಾರತ ಚುನಾವಣಾ ಆಯೋಗವು ದಿನಾಂಕ 12.09.2025ರಂದು ಹೊರಡಿಸಿದ ವೇಳಾಪಟ್ಟಿಗನುಗುಣವಾಗಿ ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕರಡು ಮತದಾರರ ಪಟ್ಟಿಯನ್ನು ಪ್ರಚುರಪಡಿಸಲಾಗಿದೆ ಎಂದು ತಿಳಿಸಿದರು.

ಈ ಕರಡು ಮತದಾರರ ಪಟ್ಟಿಯ ಭೌತಿಕ ಪ್ರತಿಯು ಸಂಬಂಧಪಟ್ಟ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಸಹಾಯಕ ಮತದಾರರ ನೋಂದಣಾಧಿಕಾರಿಗಳಾದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಮಹಾನಗರ ಪಾಲಿಕೆಯ ಆಯುಕ್ತರು ಹಾಗೂ ತಹಸೀಲ್ದಾರ ಕಚೇರಿಯಲ್ಲಿ ಲಭ್ಯವಿದ್ದು ಮತದಾರರು ಪರಿಶೀಲಿಸಿಕೊಳ್ಳಬಹುದಾಗಿದೆ. ಇದನ್ನು ಹೊರತುಪಡಿಸಿಯು ಸಹ ಸರ್ಕಾರದ ಅಧಿಕೃತ ಅಂತರ್ಜಾಲದಲ್ಲಿಯು ಸಹ ಮಾಹಿತಿಗಾಗಿ ಲಭ್ಯವಿದ್ದು ಇದನ್ನು ಮತದಾರರು ಅವಲೋಕಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಹೀಗೆ ಪಚುರಪಡಿಸಲಾದ ಕರಡು ಮತದಾರರ ಪಟ್ಟಿಯಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಂಬಂಧಪಟ್ಟ ಮತದಾರರು ಲಿಖಿತವಾಗಿ ಆಯಾ ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ಆಕ್ಷೇಪಣೆಯನ್ನು ಡಿಸೆಂಬರ್ 10ರವರೆಗೆ ಸಲ್ಲಿಸಬಹುದೆಂದು ಸಾರ್ವಜನಿಕರಿಗೆ ತಿಳಿಯಪಡಿಸಿದೆ ಎಂದರು.

ಇದನ್ನು ಹೊರತುಪಡಿಸಿಯು ಸಹ ಇದೊಂದು ನಿರಂತರ ನೋಂದಣಿ ಪ್ರಕ್ರಿಯೆಯಾಗಿರುವ ಹಿನ್ನೆಲೆಯಲ್ಲಿ, ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದವರೆಗೂ ಅರ್ಹ ಮತದಾರರು ಅವಶ್ಯಕ ದಾಖಲೆಗಳೊಂದಿಗೆ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆಂದು ಅಪರ ಜಿಲ್ಲಾಧಿಕಾರಿಗಳು ಸಭೆಯ ಮೂಲಕ ಸಾರ್ವಜನರಿಕರಿಗೆ ತಿಳಿಸಿದರು. ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು ಪ್ರತಿನಿಧಿಗಳು, ಚುನಾವಣೆಯ ಶಾಖೆಯ ಶಿರಸ್ತೇದಾರರು ಇದ್ದರು.



ಯುವ ಮಾರ್ಗ



## ಮಾವಿನಕೆರೆ ಉದ್ಯಾನವನಕ್ಕೆ ಸಾರ್ವಜನಿಕ ಪ್ರವೇಶಕ್ಕೆ ನಿರ್ಬಂಧ

**ರಾಯಚೂರು,ನ.28–**ನಗರದ ಮಹಾನಗರ ಪಾಲಿಕೆ ವ್ಯಾಪ್ತಿಯ ಮಾವಿನಕೆರೆ ಉದ್ಯಾನವನದಲ್ಲಿ ವಿವಿಧ ಅಭಿವೃದ್ಧಿ ಹಾಗೂ ಸೌಂದರ್ಯವರ್ಧಕ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿರುವ ಹಿನ್ನೆಲೆ, ಉದ್ಯಾನವನ್ನು ತಾತ್ಕಾಲಿಕವಾಗಿ ಸಾರ್ವಜನಿಕ ಪ್ರವೇಶಕ್ಕೆ ನಿರ್ಬಂಧ ಹೇರಲು ತೀರ್ಮಾನಿಸಿದೆ.

ಸದರಿ ಉದ್ಯಾನವನದಲ್ಲಿ ರಸ್ತೆ ನಿರ್ಮಾಣ, ಕಾಲುದಾರಿ ಇಂಟರ್‌ಲಾಕಿಂಗ್, ಬೇಲಿ ಕಾಮಗಾರಿಗಳು, ಅಲಂಕಾರಿಕ ವಿದ್ಯುತ್ ಕಂಬಗಳ ಸ್ಥಾಪನೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ಮುಂದಿನ ದಿನಗಳಲ್ಲಿ ನಡೆಯಲಿವೆ. ಈ ಹಿನ್ನೆಲೆಯಲ್ಲಿ ನವೆಂಬರ್ 29 ರಿಂದ ಮುಂದಿನ ಮೂರು ತಿಂಗಳುಗಳ ಕಾಲ ಮಾವಿನಕೆರೆಯ ಕಾಮಗಾರಿಗಳನ್ನು ಸುರಕ್ಷಿತವಾಗಿ ಮತ್ತು ತಾಂತ್ರಿಕವಾಗಿ ನೆರವೇರಿಸಲು ಸಾರ್ವಜನಿಕರ ಪ್ರವೇಶವನ್ನು ನಿಯಂತ್ರಿಸುವುದು ಅಗತ್ಯವಿದ್ದು, ಮಾವಿನಕೆರೆ ಪಬ್ಲಿಕ್ ಗಾರ್ಡನ್ ಉದ್ಯಾನವನಕ್ಕೆ ಸಾರ್ವಜನಿಕರ ಪ್ರವೇಶವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ. ಕಾಮಗಾರಿಗಳ ಅವಧಿಯಲ್ಲಿ ನಾಗರಿಕರು ಸಹಕಾರ ನೀಡುವಂತೆ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಪಾತ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರತಿಭಾ ಕಾರಂಜಿಯಲ್ಲಿ ಜವಳಗೇರಾ ಮುರಾರ್ಜಿ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ – ಪ್ರಾಚಾರ್ಯ ಮೌಲಾಲಿ ದೊಡ್ಡಮನಿ ಹರ್ಷ




**ಯುವಮಾರ್ಗ ಸುದ್ದಿ**

**ಸಿಂಧನೂರು,ನ.28–** ತಾಲೂಕಿನ ಜವಳಗೇರಾ ವಲಯ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲಕೋತ್ಸವ 2025 ಜವಳಗೇರಾದಲ್ಲಿ ನಡೆದ ಸ್ಪರ್ಧೆಗಳಲ್ಲಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಜವಳಗೇರಾ ವಿದ್ಯಾರ್ಥಿಗಳು ಭಾಗವಹಿಸಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಶಾಲೆಯ ಪ್ರಾಚಾರ್ಯರು ಮೌಲಾಲಿ ದೊಡ್ಡಮನಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪ್ರೌಢ ಶಾಲೆಯ ವಿಭಾಗದಲ್ಲಿ ಯರ್ರಿಸ್ವಾಮಿ ಹತ್ತನೇ ತರಗತಿ ವಿದ್ಯಾರ್ಥಿ ಹಿಂದಿ ಭಾಷಣದಲ್ಲಿ ಪ್ರಥಮ ಸ್ಥಾನ ಹಾಗೂ ಸವಿತಾ 9ನೇ ತರಗತಿ ವಿದ್ಯಾರ್ಥಿ ಕನ್ನಡ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಆಫಿಯ ಒಂಬತ್ತನೇ ತರಗತಿ ವಿದ್ಯಾರ್ಥಿನಿ ಇಂಗ್ಲಿಷ್ ಭಾಷಣದಲ್ಲಿ ಪ್ರಥಮ ಸ್ಥಾನ ಹಾಗೂ ರಾಧಿಕಾ 9ನೇ ತರಗತಿ ವಿದ್ಯಾರ್ಥಿನಿ ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಯರ್ರಿಸ್ವಾಮಿ ಮತ್ತು ಪ್ರಜ್ವಲ್ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ ಹಾಗೂ ವಂಶಿ 10ನೇ ತರಗತಿ ವಿದ್ಯಾರ್ಥಿನಿ ಭಾವಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಕೃಷ್ಣ 9ನೇ ತರಗತಿ ವಿದ್ಯಾರ್ಥಿ ಚಿತ್ರಕಲೆ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ಕಾವೇರಿ 9ನೇ ತರಗತಿ ವಿದ್ಯಾರ್ಥಿನಿ ಮಿಮಿಕ್ರಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸುವುದರ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.

ಹಾಗೂ ಅರುಣ್ ಕುಮಾರ್ ಹತ್ತನೇ ತರಗತಿ ಚರ್ಚಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಮಲ್ಲಿಕಾ ಎಂ 9ನೇ ತರಗತಿ ವಿದ್ಯಾರ್ಥಿನಿ ರಂಗೋಲಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಕಾಫಿಯ 9ನೇ ತರಗತಿ ವಿದ್ಯಾರ್ಥಿನಿ ಧಾರ್ಮಿಕ ಪಠಣದಲ್ಲಿ ದ್ವಿತೀಯ ಸ್ಥಾನ ಪಡೆದು ಪ್ರೌಢ ವಿಭಾಗಕ್ಕೆ ಕೀರ್ತಿ ತಂದಿದ್ದಾರೆ ಮತ್ತು ಪ್ರಾಥಮಿಕ ವಿಭಾಗದಲ್ಲಿ ತಿನೇತ್ರ ಪ್ರಬಂಧ ರಚನೆಯಲ್ಲಿ ಪ್ರಥಮ ಸ್ಥಾನ ಹಾಗೂ ಶಿವ ಪ್ರಸಾದ್ ಮಣ್ಣಿನ ಮಾದರಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ವೆಂಕಟರೆಡ್ಡಿ ಮಿಮಿಕ್ರಿಯಲ್ಲಿ ದ್ವಿತೀಯ ಸ್ಥಾನ ಸೈಫ್ ಉದ್ದಿನ್ ಚಿತ್ರಕಲೆಯಲ್ಲಿ ದ್ವಿತೀಯ ಸ್ಥಾನ ಪಡೆದು ಪ್ರಾಥಮಿಕ ವಿಭಾಗಕ್ಕೆ ಕೀರ್ತಿ ತಂದಿದ್ದಾರೆ.

ಈ ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಪ್ರಾಚಾರ್ಯರು ಮೌಲಾಲಿ ದೊಡ್ಡಮನಿ ಅವರು ಸುದ್ದಿಗೋಷ್ಠಿಯಲ್ಲಿ ಸಂತಸ ವ್ಯಕ್ತಪಡಿಸಿದ್ದಾರೆ ನಮ್ಮ ಶಾಲೆಯ ಸಾಧನೆಗೆ ತರಬೇತಿ ನೀಡಿದ ಎಲ್ಲಾ ನನ್ನ ಸಿಬ್ಬಂದಿ ಸ್ನೇಹಿತರಿಗೆ ತುಂಬು ಹೃದಯದ ಧನ್ಯವಾದಗಳು ತಿಳಿಸಿದ್ದಾರೆ.ಈ ಸಂದರ್ಭದಲ್ಲಿ ಶಾಲೆಯ ಪ್ರಾಚಾರ್ಯರು ಮೌಲಾಲಿ ದೊಡ್ಡಮನಿ, ಸಹ ಶಿಕ್ಷಕರಾದ ವಿಶ್ವನಾಥ್ ಎ.ಕೆ , ರತೀಂದ್ರ ರಾಯ್,ದುರುಗಪ್ಪ, ಹನುಮೇಶ, ಮೌನೇಶ್, ಯೂಸುಫ್ ಸಾಬ್,ಆಂಜನೇಯ,ಸಣ್ಣ ಹುಸೇನಪ್ಪ,ಸುನಿಲ್ ಕುಮಾರ್ ಹಾಗೂ ಪ್ರಥಮ ದರ್ಜೆ ಸಹಾಯಕರು ಲಾವಣ್ಯ ಹಾಗೂ ನರ್ಸಿಂಗ್ ಆಫೀಸರ್ ಗೀತಾಂಜಲಿ ಸೇರಿ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮುಂದಿನ ತಾಲೂಕು, ಜಿಲ್ಲಾ , ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಕಲಾಕೋತ್ಸವದಲ್ಲಿ ಕೂಡ ಇದೆ ರೀತಿ ನಿಮ್ಮ ಸಾಧನೆ ಮುಂದುವರೆಯಲಿ ಎಂದು ವಿದ್ಯಾರ್ಥಿಗಳಿಗೆ ಶುಭಾಶಯ ತಿಳಿಸಿದ್ದಾರೆ.

ಸುದ್ದಿ ಮತ್ತು
ಜಾಹೀರಾತಿಗಾಗಿ ಸಂಪರ್ಕಿಸಿ
9743497111,9743496111

## ಗದಗ ರೈಲ್ವೆ ನಿಲ್ದಾಣಕ್ಕೆ ಪುಟ್ಟರಾಜ ಗವಾಯಿ ನಾಮಕರಣ ಅಗತ್ಯ : ಶಿವಕುಮಾರ್ ಚಲ್ಮಲ್



**ಯುವಮಾರ್ಗ ಸುದ್ದಿ**

**ಮಾನ್ವಿ,ನ.28–**ಗದಗ ರೈಲ್ವೆ ನಿಲ್ದಾಣಕ್ಕೆ "ಶ್ರೀ ಗಾನಯೋಗಿ ಪಂಡಿತ್ ಪುಟ್ಟರಾಜ ಗವಾಯಿ" ಅವರ ಪವಿತ್ರ ಹೆಸರು ನಾಮಕರಣ ಮಾಡುವಂತೆ ವಿನಂತಿಸುವ ಮನವಿಯನ್ನು ಸಂಕಲ್ಪ ವಿಕಲಚೇತನರ ಒಕ್ಕೂಟದ ವತಿಯಿಂದ ಇಂದು ಮಾನ್ವಿ ತಹಸೀಲ್ದಾರರ ಮೂಲಕ ರಾಯಚೂರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಕಲ್ಪ ವಿಕಲಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವಕುಮಾರ್ ಚಲ್ಮಲ್ ಅವರು ಹೀಗಂದರು:

"ಪುಟ್ಟರಾಜ ಗವಾಯಿಗಳವರು ದಿವ್ಯಾಂಗ ಸಮುದಾಯಕ್ಕೆ ಮಾತ್ರವಲ್ಲ, ಸಂಪೂರ್ಣ ಸಮಾಜಕ್ಕೆ ದಾರಿ ತೋರಿಸಿದ ಮಹನೀಯರು. ಅವರ ಜೀವನವೇ ಸೇವೆ, ತ್ಯಾಗ ಮತ್ತು ಮಾನವೀಯತೆಯ ನಿದರ್ಶನ. ಅಂತಹ ಮಹನೀಯರ ನಾಮವನ್ನು ಗದಗ ರೈಲ್ವೆ ನಿಲ್ದಾಣಕ್ಕೆ ನಾಮಕರಣ ಮಾಡಿದರೆ ಅದು ಕರ್ನಾಟಕದ ಹೆಮ್ಮೆ, ದಿವ್ಯಾಂಗರ ಗೌರವ" ಎಂದು ಹೇಳಿದರು.

ಮುಂದುವರಿಸಿ, "ಸಮಾಜದಲ್ಲಿ ದಿವ್ಯಾಂಗರಿಗಾಗಿ ಗವಾಯಿಗಳವರು ಮಾಡಿದ ಸೇವೆ ಅಮೂಲ್ಯ. ಅವರ ಹೆಸರು ನಿಲ್ದಾಣಕ್ಕೆ ಸಿಗುವುದರಿಂದ ಮುಂದಿನ ಪೀಳಿಗೆಗಳಿಗೆ ಇದು ಪ್ರೇರಣೆಯಾಗಲಿದೆ. ಸರ್ಕಾರ ಮತ್ತು ರೈಲ್ವೆ ಇಲಾಖೆ ಈ ಮನವಿಯನ್ನು ಗಂಭೀರವಾಗಿ ಪರಿಗಣಿಸಬೇಕು" ಎಂದು ಅವರು ಮನವಿ ಮಾಡಿದರು.

ಸಲ್ಲಿಸಲಾದ ಮನವಿಯಲ್ಲಿ, ಗದಗ ರೈಲ್ವೆ ನಿಲ್ದಾಣವನ್ನು "ಶ್ರೀ ಗಾನಯೋಗಿ ಪಂಡಿತ್ ಪುಟ್ಟರಾಜ ಗವಾಯಿ ರೈಲ್ವೆ ನಿಲ್ದಾಣ" ಎಂದು ನಾಮಕರಣ ಮಾಡುವಂತೆ ರೈಲ್ವೆ ಇಲಾಖೆ ಮತ್ತು ರೈಲ್ವೆ ಸಚಿವಾಲಯಕ್ಕೆ ಜಿಲ್ಲಾ ಆಡಳಿತ ಶಿಫಾರಸು ಕಳುಹಿಸಬೇಕೆಂದು ಒಕ್ಕೂಟವು ಬೇಡಿಕೆ ಮಾಡಿದೆ.

ಈ ಸಂದರ್ಭದಲ್ಲಿ ಒಕ್ಕೂಟದ ಗೌರವಾಧ್ಯಕ್ಷ ದೇಸಾಯಿ ದೊತರಬಂಡಿ, ಜಿಲ್ಲಾ ಉಪಾಧ್ಯಕ್ಷೆ ಸಾವಿತ್ರಮ್ಮ, ತಾ ಅಧ್ಯಕ್ಷೆ ಲಕ್ಷ್ಮೀ, ಪುರಸಭೆ ಮಾಜಿ ಸದಸ್ಯ ಎಸ್.ವೆಂಕೋಬ, ಪುರಸಭೆ ನಾಮ ನಿರ್ದೇಶಕ ಸದಸ್ಯ ವಿಜಯಕುಮಾರ್ ಗೌಡ, ಒಕ್ಕೂಟದ ಸದಸ್ಯರಾದ ಮಹದೇವಪ್ಪ ಹೂಗಾರ್, ಕೆ.ಸತ್ಯನಾರಾಯಣ, ವಿ.ಮೌನೇಶ, ಬಿ.ಸುರೇಶ, ಮಂಜುನಾಥ ಸೇರಿದಂತೆ ಇನ್ನಿತರರು ಇದ್ದರು.

## ಎಲ್‌ಬಿಎಸ್ ನಗರದದಲ್ಲಿ ಎಲ್ ಕೆಜಿ, ಯುಕೆಜಿ ಪೂರ್ವ ಪ್ರಾಥಮಿಕ ತರಗತಿಗೆ ಆರಂಭ

**ಯುವಮಾರ್ಗ ಸುದ್ದಿ**

**ರಾಯಚೂರು,ನ.28–** ರಾಯಚೂರು ನಗರದ ಮಡ್ಡಿಪೇಟೆ ವ್ಯಾಪ್ತಿಯಲ್ಲಿ ಬರುವ ಎಲ್‌ಬಿಎಸ್ ನಗರದ 12ನೇ ಅಂಗನವಾಡಿ ಕೇಂದ್ರದಲ್ಲಿ ನವೆಂಬರ್ 28ರಂದು ಎಲ್ ಕೆಜಿ ಹಾಗೂ ಯುಕೆಜಿ ಪೂರ್ವ ಪ್ರಾಥಮಿಕ ತರಗತಿ ಆರಂಭದ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನ ಮೇಕ್ರಿ ಸರ್ಕಲ್ ಹತ್ತಿರದ ಅರಮನೆ ಮೈದಾನದಲ್ಲಿನ ಕೃಷ್ಣ ವಿಹಾದಲ್ಲಿ ನವೆಂಬರ್ 28ರಂದು ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ರಾಯಚೂರು ನಗರದ ಅಂಗನವಾಡಿ ಕೇಂದ್ರ ಸೇರಿದಂತೆ ರಾಜ್ಯದ 5000 ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ಆರಂಭಿಸುವ ಬಗ್ಗೆ ಘೋಷಣೆ ಮಾಡುತ್ತಿದ್ದಂತೆ ರಾಯಚೂರು ನಗರದ ಅಂಗನವಾಡಿ ಕೇಂದ್ರದಲ್ಲಿ ಹಬ್ಬದ ಸಂಭ್ರಮ ಕಂಡುಬಂದಿತು.

ಕಾರ್ಯಕ್ರಮ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರವನ್ನು ತಳಿರು ತೋರಣಗಳಿಂದ ಶಿಂಗರಿಸಲಾಗಿತ್ತು.

ಒಂದೇ ಬಗೆಯ ಬಣ್ಣದ ಅಂಗಿ ತೊಟ್ಟು ಶಿಸ್ತಿನಿಂದ ಆಗಮಿಸಿ, ಲವಲವಿಕೆಯಿಂದಾಗಿ ಗಮನ ಸೆಳೆದವು.

ಎಲ್ ಕೆಜಿ ಮತ್ತು ಯುಕೆಜಿ ತರಗತಿಗಳ ಶುಭಾರಂಭದ ಹಿನ್ನೆಲೆಯಲ್ಲಿ ಅಂಗನವಾಡಿಯಲ್ಲಿ ಸಿಹಿ ಅಡುಗೆ ತಯಾರಿಸಿ ಮಕ್ಕಳಿಗೆ ಬಡಿಸಲಾಯಿತು.

**ಕಾರ್ಯಚಟುವಟಿಕೆ ವೀಕ್ಷಣೆ:** ಎಲ್ ಬಿಎಸ್ ನಗರದ ಅಂಗನವಾಡಿ ಕೇಂದ್ರದ ಲ್ಲಿನ ಮೂಲಸೌಕರ್ಯ ಮತ್ತು ಮಕ್ಕಳ ಚಟುವಟಿಕೆ ವೀಕ್ಷಣೆಗೆ ಕಾರ್ಯಕ್ರಮದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ರಾಜ್ಯದ 5000 ಅಂಗನವಾಡಿಗಳ ಪೈಕಿ ಆಯ್ದ ಕೆಲ ಅಂಗನವಾಡಿಗಳ ಚಟುವಟಿಕೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರದರ್ಶಿಸಲಾಯಿತು. ರಾಯಚೂರ ಅಂಗನವಾಡಿ ಕೇಂದ್ರದ ಮಕ್ಕಳನ್ನು ಖುರ್ಚಿಗಳಲ್ಲಿ ಸಾಲಾಗಿ ಕುಳಿಸಿ ಅಂಗನವಾಡಿ ಶಿಕ್ಷಕಿಯರು ಪಾಠ ಬೋಧನೆಯ ಚಟುವಟಿಕೆ ನಡೆಸಿದರು.

**ಸಂತೋಷ:** ನಮ್ಮ ಎಲ್‌ಬಿಎಸ್ ನಗರದ 12ನೇ ಅಂಗನವಾಡಿ ಕೇಂದ್ರವು ಮೂಲಭೂತ ಸೌಕರ್ಯ ಹೊಂದಿದೆ. ಕಸದಿಂದ




ರಸ ಅನ್ನುವಂತೆ ಪರಿಸರದಲ್ಲಿನ ಸಾಮಗ್ರಿಗಳನ್ನು ಮತ್ತು ಇಲಾಖೆಯಿಂದ ವಿತರಿಸಿದ ಶಾಲಾ ಕಿಟಗಳನ್ನು ಮಕ್ಕಳ ಕಲಿಕೆಗೆ ಬಳಸಿಕೊಂಡಿದ್ದೇವೆ. ಸೂಕ್ತ ತರಬೇತಿ ಪಡೆದುಕೊಂಡು ಈಗಾಗಲೇ ಪೂರ್ವ ಪ್ರಾಥಮಿಕ ತರಗತಿಗೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದ್ದೇವೆ. ನಮ್ಮ ಅಂಗನವಾಡಿಯು ಆಯ್ಕೆಯಾಗಿದ್ದು ಸಂತಷ ಅನಿಸಿದೆ. ಮಾನ್ಯ ಸಚಿವರು, ಸಂಸದರು, ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ ಅವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ರಾಯಚೂರು ಸಿಡಿಪಿಓ, ಜಿಲ್ಲಾ ನಿರೂಪನಾಧಿಕಾರಿಗಳು, ಹಿರಿಯ ಮೇಲ್ವಿಚಾರಕಿಯರು, ಪೋಷಣಾ ಅಭಿಯಾನದ ಸಂಯೋಜಕರ ಸಹಕಾರ ಮತ್ತು ಮಾರ್ಗದರ್ಶನಕ್ಕೆ ಧನ್ಯವಾದ ತಿಳಿಸುತ್ತೇವೆ ಎಂದು ಅಂಗನವಾಡಿಯ ಕಾರ್ಯಕರ್ತೆ ರೇಷ್ಮಾ ಹಾಗೂ ಮೇಲ್ವಿಚಾರಕಿ ಭಾರತಿಭಾಯಿ ಅವರು ಇದೆ ವೇಳೆ ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಕೇಂದ್ರ ವ್ಯಾಪ್ತಿಯ ನಾಗರಿಕರು, ಮಕ್ಕಳ ಪಾಲಕರು ಮತ್ತು ಇನ್ನೀತರರು ಇದ್ದರು.

## ಎಪಿಎಂಸಿ ಅಧ್ಯಕ್ಷರನ್ನು ಕೂಡಲೇ ವಜಾಗೊಳಿಸಬೇಕು: ಅಜೀಜ್

**ಯುವಮಾರ್ಗ ಸುದ್ದಿ**



**ದೇವದುರ್ಗ,ನ.28–** ತಾಲೂಕಿನ ತಿಂಥಣಿ ಬ್ರಿಜ್ ನಲ್ಲಿ ಕಾನೂನು ಬಾಹಿರವಾಗಿ ಅಕ್ರಮವಾಗಿ ಚೆಕ್ ಪೋಸ್ಟ್ ನಿರ್ಮಿಸಿ ಹಣ ವಸಲಿ ಹಿಳಿದ ಎಪಿಎಂಸಿ ಅಧ್ಯಕ್ಷ ಆದನಗೌಡ ಬುಂಕಲದೊಡ್ಡಿ ಅವರನ್ನು ಕೂಡಲೇ ಎಪಿಎಂಸಿ ಅಧ್ಯಕ್ಷ ಸ್ಥಾನದಿಂದ ವಜಗೊಳಿಸಬೇಕು ಎಂದು ಎಪಿಎಂಸಿ ಉಪಾಧ್ಯಕ್ಷ ಅಬ್ದುಲ್ ಅಜೀಜ್ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ, ಉದ್ದೇಶಿಸಿ ಗುರುವಾರ ಮಾತನಾಡಿದರು.

ತಿಂತಿಣಿ ಬ್ರಿಡ್ಜ್ ನಲ್ಲಿ ಅಕ್ರಮವಾಗಿ ಇಬ್ಬರು ಖಾಸಗಿ ವ್ಯಕ್ತಿಗಳನ್ನು ನೇಮಿಸಿ ಸರಕು ವಾಹನಗಳಿಂದ ಪ್ರತಿದಿನ ಪ್ರತಿವಾಹನಕ್ಕೆ ಎರಡುನೂರು ರೂಪಾಯಿಗಳಂತೆ ಕಾನೂನು ಬಾಹಿರವಾಗಿ ಪ್ರತಿ ದಿನ 30ರಿಂದ 40ಸಾವಿರು ಹಣ ಉಸಿಲಿಗೆ ಇಳಿದಿರುವ ಎಪಿಎಂಸಿ ಅಧ್ಯಕ್ಷ ಹಾಗೂ ಕಾರ್ಯದರ್ಶಿ ನೀಲಪ್ಪ ಶೆಟ್ಟಿ ಹಾಗೂ ಇಬ್ಬರ ಖಾಸಗಿ ವ್ಯಕ್ತಿಗಳಾದ ರಮೇಶ್ ಹಾಗೂ ಚಂದ್ರು, ಸೇರಿ ನಾಲ್ಕು ಜನರನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.ಎಂದು ಆಗ್ರಹಿಸದರು.

ಆದನಗೌಡ ಎಪಿಎಂಸಿ ಅಧ್ಯಕ್ಷರಾದ ಬಳಿಕ ಎಪಿಎಂಸಿಯಲ್ಲಿ ಯಾವ ಅಭಿವೃದ್ಧಿ ಕಾಮಗಾರಿ ನಡೆಯುತ್ತಿಲ್ಲ. ಪ್ರತಿ ತಿಂಗಳ ಸಭೆ ಕರೆಯದೆ. ಹಿಂದಿನ ಕಾರ್ಯದರ್ಶಿ ರಂಗನಾಥ್ ಅವರ ಅಣತಿಯಂತೆ ಏಕ ಪಕ್ಷೀಯ ನಿರ್ಧಾರ ತೆಗೆದುಕೊಂಡು ನಿರ್ದೇಶಕ ರನ್ನು ಕಡೆಗಣಿಸಿ. ಅಕ್ರಮವಾಗಿ ದುಡ್ಡು ಮಾಡುವ ಮೂಲಕ ಎಪಿಎಂಸಿ ಮಾನ ಹರಾಜು ಹಾಕಿದ್ದಾರೆ. ಇದರ ಬಗ್ಗೆ ಜಿಲ್ಲಾ ಉಸ್ತುವಾರಿ ಮಂತ್ರಿ, ಸಂಬಂಧಪಟ್ಟ ಅಧಿಕಾರಿಗಳಿಗೆ, ದೂರ ನೀಡಲಾಗಿದೆ. ಕೂಡಲೇ ಅಧ್ಯಕ್ಷ ಮತ್ತು ನೀಲಪ್ಪ ಶೆಟ್ಟಿ ಎಪಿಎಂಸಿ ಕಾರ್ಯದರ್ಶಿ ಅವರನ್ನು ಸೇವೆಯಿಂದ ವಜಗೊಳಿಸಿ. ಸೂಕ್ತ ತನಿಖೆ ಒಳಪಡಿಸಿ ಇವರು ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದರು. ಈ ಸಂದರ್ಭದಲ್ಲಿ ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಶರಣಗೌಡ ಹಂಚಿನಾಳ, ರಂಗಪ್ಪ ಗೋಸಲ್, ಶರಣಗೌಡ ಕಮತಗಿ, ಎಂ.ಡಿ. ಶಿವರಾಜ, ರಾಜಾವಾಸುದೇವ ನಾಯಕ, ವೀರೇಶ ನಾಯಕ, ಧರ್ಮಣ್ಣ ಗೌಡ, ನೂರಪ್ಪ ನಾಯಕ, ಸೇರಿದಂತೆ ಇತರರಿದ್ದರು

## ನೋಂದಾಯಿತ ಸಂಘ ಸಂಸ್ಥೆಗಳಿಗೆ ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನ

**ರಾಯಚೂರು,ನ.28–** 2025–26ನೇ ಸಾಲಿಗೆ ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ–ಸಂಸ್ಥೆಗಳಿಗೆ ಧನಸಹಾಯ ನೀಡಲು ಹಾಗೂ ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷಭೂಷಣಗಳ ಖರೀದಿಗೆ ಸಹಾಯಧನ ಹಾಗೂ ಚಿತ್ರಕಲೆ/ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ ನೀಡಲು ಸಾಮಾನ್ಯ/ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಉಪ ಯೋಜನೆಯಡಿ ಆನ್ ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಸೌಲಭ್ಯ ಪಡೆಯಲು ಅರ್ಹ ಅಭ್ಯರ್ಥಿಗಳು ಸೇವಾಸಿಂಧು Sevasindhu.karnataka.gov.in ವೆಬ್ಸೈಟ್ ಗೆ ಭೇಟಿ ನೀಡಿ ಡಿಸೆಂಬರ್ 30ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅರ್ಜಿಗಳನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕರಿಸುವುದಿಲ್ಲ. ಮಾಹಿತಿಗಾಗಿ 08532–232572 ಅನ್ನು ಹಾಗೂ ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯೊಳಗೆ ಮತ್ತು ಆಯಾ ಜಿಲ್ಲೆಯ ವ್ಯವಸ್ಥಾಪಕರು, ಸೇವಾಸಿಂಧು ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಮಟಕಾ, ಜೂಜಾಟ: ಐವರ ಬಂಧನ

**ಕಲಬುರಗಿ,ನ.28–**ನಗರ ನೆಹರು ಗಂಜ್‌ನ ಎಪಿಎಂಸಿ ಯಾರ್ಡ್‌ನಲ್ಲಿರುವ ಹನುಮಾನ ಗುಡಿ ಪಕ್ಕದ ಖಿಲ್ಲಾ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಚೌಕ್ ಪೊಲೀಸ್ ಠಾಣೆ ಪಿಎಸ್‌ಐ ಕವಿತಾ ಚವ್ಹಾಣ್ ಹಾಗೂ ಸಿಬ್ಬಂದಿಗಳಾದ ಎಎಸ್‌ಐ ತಾರಾಸಿಂಗ್, ರೇವಣಸಿದ್ದಪ್ಪ, ಸುರೇಶ ಅವರು ದಾಳಿ ನಡೆಸಿ ಅಂಬರೀಷ ತಳವಾರ, ಬಾಬರ್ ಪಟೇಲ್, ಮಹ್ಮದ್ ಯೂಸೂಫ್ ಖುರೇಷಿ, ಮಹ್ಮದ್ ಅಜೀಜ್ ಎಂಬುವವರನ್ನು ಬಂಧಿಸಿ 3600 ರೂ.ನಗದು ಮತ್ತು ಇಸ್ಪಿಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದ ನಾಗನಹಳ್ಳಿ ಸೀಮಾಂತರದ ಮರಗಮ್ಮ ಗುಡಿಯ ಎದುರುಗಡೆಯ ಸಾರ್ವಜನಿಕ ರಸ್ತೆ ಮೇಲೆ ಮಟಕಾ ನಂಬರ್ ಬರೆದುಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇಲೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಎಎಸ್‌ಐ ನಿಜಲಿಂಗಪ್ಪ, ಸಿಬ್ಬಂದಿಗಳಾದ ವಿಠೋಬಾ, ಫಿರೋಜ್ ಖಾನ್, ವಿಶಾಲಸಿಂಗ್ ಅವರು ದಾಳಿ ನಡೆಸಿ ಜೇವರ್ಗಿ ತಾಲ್ಲೂಕಿನ ಅಣಜಗಿ ತಾಂಡಾದ ಸಿದ್ದಣ್ಣ ಹರವಾಳ ಎಂಬಾತನನ್ನು ಬಂಧಿಸಿ 1,250 ರೂ.ನಗದು, 2 ಸಾವಿರ ರೂಪಾಯಿ ಮೌಲ್ಯದ ಮೊಬೈಲ್ ಮತ್ತು ಮಟಕಾ ಚೀಟಿ ಜಪ್ತಿ ಮಾಡಿದ್ದಾರೆ. ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಗಲು ಮನೆ ಕಳ್ಳತನ ಮಾಡುತ್ತಿದ್ದ ಆರೋಪಿ ಬಂಧನ

**ಕಲಬುರಗಿ,ನ.28–**ಹಗಲು ಮನೆ ಕಳ್ಳತನ ಮಾಡುತ್ತಿದ್ದ ಆರೋಪಿಯೊಬ್ಬನನ್ನು ಬಂಧಿಸಿ 4 ಮನೆ ಕಳ್ಳತನ ಪ್ರಕರಣ ಪತ್ತೆ ಹಚ್ಚಿ 5 ಲಕ್ಷ ರೂಪಾಯಿ ಮೌಲ್ಯದ 50 ಗ್ರಾಂ.ಬಂಗಾರದ ಆಭರಣಗಳನ್ನು ವಶ ಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಖದೀರ್ ಚೌಕ್‌ನ ಮಹ್ಮದ್ ಸಮೀರ್ ತಂದೆ ಶೇಖ್ ಮುನಿರೋದ್ದೀನ್ (22) ಎಂಬಾತನನ್ನು ಬಂಧಿಸಿ 4 ಮನೆ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ 5 ಲಕ್ಷ ರೂಪಾಯಿ ಮೌಲ್ಯದ 50 ಗ್ರಾಂ.ಬಂಗಾರದ ಆಭರಣ ವಶ ಪಡಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು.

ಹಗಲು ಹೊತ್ತಿನಲ್ಲಿ ಮನೆ ಬೀಗ ಮುರಿದು ಬಂಗಾರ ಕಳ್ಳತನ ಮಾಡಲಾಗಿದೆ ಎಂದು ನಗರದ ಚಿಂಚೋಳಿ ಲೇಔಟ್‌ನ ನಿವಾಸಿ ಮಲ್ಲಿಕಾರ್ಜುನ ಕಲಶೆಟ್ಟಿ ಅವರು ಆರ್.ಜಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆಗೆ ನಗರ ಪೊಲೀಸ್ ಆಯುಕ್ತರು, ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ನಾಯಕ್, ದಕ್ಷಿಣ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಶರಣಬಸಪ್ಪ ಸುಬೇದಾರ ಅವರ ಮಾರ್ಗದರ್ಶನದಲ್ಲಿ ರಾಘವೇಂದ್ರ ನಗರ ಪೊಲೀಸ್ ಠಾಣೆ ಪಿಐ ಎ.ವಾಜೀದ್ ಪಟೇಲ್ ಅವರ ನೇತೃತ್ವದಲ್ಲಿ ಪಿಎಸ್‌ಐ ಸುಭಾಷಚಂದ್ರ, ಎಎಸ್‌ಐ ಮಲ್ಲಿಕಾರ್ಜುನ ಜಾನಿ, ಸಿಬ್ಬಂದಿಗಳಾದ ಮಲ್ಲನಗೌಡ, ಉಮೇಶ, ಶರಣಬಸವ, ಅರೇಶ, ಪ್ರಶಾಂತ, ಬಸವರಾಜ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಆರೋಪಿ ಮಹ್ಮದ್ ಸಮೀನ್‌ನನ್ನು ಬಂಧಿಸಿ ಚಿನ್ನಾಭರಣ ವಶ ಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ಅವರು ವಿವರಿಸಿದರು.

ಹಗಲು ಮನೆಗಳ್ಳತನ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H